ಮುಂದಿನ ಬಾಕ್ಸ್‌ಗಳನ್ನು ತುಂಬಿ. ಪ್ರತಿ ಒಗಟಿನಲ್ಲಿ ಎಲ್ಲಾ ಸಂಖ್ಯೆಗಳು 1 ರಿಂದ 9 ರವರೆಗೆ ಇವೆ. ಪ್ರತಿ ಅಡ್ಡ ಸಾಲಿನ ಸಂಖ್ಯೆಗಳ ಮೊತ್ತವು ಬಲಭಾಗದ ಬಾಕ್ಸ್‌ನಲ್ಲಿರುವ ಸಂಖ್ಯೆಯಾಗಬೇಕು. ಪ್ರತಿ ಕಂಬ ಸಾಲಿನ ಸಂಖ್ಯೆಗಳ ಮೊತ್ತವು ಸಂಖ್ಯೆಯು ಕೆಳಭಾಗದ ಬಾಕ್ಸ್‌ನಲ್ಲಿರುವ ಸಂಖ್ಯೆಯಾಗಬೇಕು.

	5	8	16
			22
1		4	7
11	16	18	

	3		12
	5		15
	7	4	18
7	15	23	

		6	10
			19
		9	16
10	12	23	



ಪ್ರತಿ ಒಗಟಿನಲ್ಲಿ ನೀಲಿ ಬಾಕ್ಸ್‌ಗಳಲ್ಲಿರುವ ಸಂಖ್ಯೆಗಳನ್ನು ಮತ್ತು ಕೆಂಪು ಬಾಕ್ಸ್‌ಗಳಲ್ಲಿರುವ ಸಂಖ್ಯೆಗಳನ್ನು ಕೂಡಿ. ನೀವು ಏನನ್ನು ಕಂಡುಕೊಳ್ಳುವಿರಿ?

ಅಜ್ಜಿಯು ವಾರ್ತಾಪತ್ರಿಕೆಯಲ್ಲಿ ಏನೋ ಮಾಡುತ್ತಿದ್ದರು. ನಂದಿನಿ ಮತ್ತು ಚಿರಾಗ್ ಅಜ್ಜಿ ಏನು ಮಾಡುತ್ತಿದ್ದಾರೆ ಎಂದು ನೋಡಿದರು.

ಜಾದೂ ಜಾದೂ ಜಾದು!!!

1 ರಿಂದ 9ರ ವರೆಗಿನ ಸಂಖ್ಯೆಗಳೊಂದಿಗೆ
ಕೂಡಿರಿ ಸಂಖ್ಯೆಗಳನ್ನು ಒಂದೇ ಸಾಲಿನಲಿ
ಎಡದಿಂದ ಬಲಕ್ಕೆ
ಮತ್ತು ಮೇಲಿನಿಂದ ಕೆಳಕ್ಕೆ
ನಿಮಗೆ ಜಾದೂ ಕಂಡಿತೇ?
ಈಗ ಬಲದಿಂದ ಎಡಕ್ಕೆ
ಮತ್ತು ಕೆಳಗಿನಿಂದ ಮೇಲಕ್ಕೆ
ಜಾದೂ ಅಲ್ಲವೇ ಇದು?
ಅಲ್ಲಿ ಇನ್ನೂ ಏನೋ ಇದೆ,
ಇನ್ನೂ ಏನೋ ಇದೆ,
ಕೂಡಿರಿ ಕರ್ಣದ ಮೇಲಿನ ಸಂಖ್ಯೆಗಳನು
ಜಾದೂ ಅಲ್ಲವೇ ಇದು?

ಅಜ್ಜಿ, ಈ ಚೌಕದಲ್ಲಿ ಯಾವ ಜಾದು ಕಾಣುತ್ತಿದೆ?

2	7	6
9	5	1
4	3	8



ಮಾಯಾ ಚೌಕವನ್ನು ಪೂರ್ತಿಗೊಳಿಸಲು ಖಾಲಿ ಜಾಗಗಳನ್ನು ಭರ್ತಿ ಮಾಡಿ.


	3	
		9
6		



ಶಿಕ್ಷಕರಿಗೆ ಟಿಪ್ಪಣಿ: ಶಿಕ್ಷಕರು ಇದೇ ರೀತಿಯ ಸಮಸ್ಯೆಗಳನ್ನು ಹಾಗೂ ಒಗಟುಗಳನ್ನು ಹೇಳುತ್ತಾ ಮಕ್ಕಳನ್ನು ಪ್ರೇರೇಪಿಸಿ.

ನಂದಿನಿ ಮತ್ತು ಚಿರಾಗ್ ಅವರ ಅಜ್ಜಿಯ ಹೊಲಕ್ಕೆ ಹೋದರು. ಅಜ್ಜಿಗೆ ಎರಡು ಹೊಲಗಳಿವೆ.





ಅಜ್ಜಿ 25 ಕೆಂಪು ಮೂಲಂಗಿಗಳು ಮತ್ತು 36 ಬಿಳಿ ಮೂಲಂಗಿಗಳನ್ನು ಕಿತ್ತರು. ಅವರು ಒಟ್ಟು ಎಷ್ಟು ಮೂಲಂಗಿಗಳನ್ನು ಕಿತ್ತರು?
ನಂದಿನಿ ಸಮಸ್ಯೆಯನ್ನು ನೆಲದ ಮೇಲೆ ಬಿಡಿಸಲು ಆರಂಭಿಸುತ್ತಾಳೆ.

ಕೆಂಪು ಮೂಲಂಗಿ 25

ಬಿಳಿ ಮೂಲಂಗಿ 36


ಮೂಲಂಗಿಗಳ ಒಟ್ಟು ಸಂಖ್ಯೆಯನ್ನು ಅಂದಾಜು ಮಾಡಿ .....



ಮೂಲಂಗಿಗಳ ಒಟ್ಟು ಸಂಖ್ಯೆಗಳನ್ನು ತಿಳಿಯಲು ನಾವು 25 ಮತ್ತು 36 ನ್ನು ಕೂಡಬೇಕು.



ಕಟ್ಟುಗಳು ಮತ್ತು ಕಡ್ಡಿಗಳನ್ನು ಬಳಸಿ ನಾನು ಕೂಡುತ್ತೇನೆ.




25 ಕೆಂಪು ಮೂಲಂಗಿಗಳು + 36 ಬಿಳಿ ಮೂಲಂಗಿಗಳು = ◯ ಮೂಲಂಗಿಗಳು

25 + 36 = ◯



ಸಂಖ್ಯಾ ರೇಖೆಯ ಮೇಲೆ ಇದನ್ನು ನಾನು ಹೇಗೆ ಮಾಡುತ್ತೇನೆ ನೋಡಿ.



ಸಂಖ್ಯಾರೇಖೆಯ ಮೇಲೆ ಅದೇ ಸಮಸ್ಯೆಯನ್ನು ಬಿಡಿಸುವ ವಿವಿಧ ವಿಧಾನಗಳನ್ನು ಕಂಡುಹಿಡಿಯಿರಿ.



ಅಜ್ಜಿ ಟೊಮೆಟೊ ಮತ್ತು ಕ್ಯಾರೆಟ್‌ಗಳನ್ನು ಒಂದು ಪೆಟ್ಟಿಗೆಯಲ್ಲಿ ಹಾಕುತ್ತಾರೆ ಮತ್ತು ಅದರ ಮೇಲೆ 100 ಎಂದು ಬರೆಯುತ್ತಾರೆ.



ನನಗೆ ನೆನಪಿದೆ ಅವರು 65 ಟೊಮೆಟೊಗಳನ್ನು ಹಾಕಿದ್ದರು.

ನಾವು ಕ್ಯಾರೆಟ್‌ಗಳನ್ನು ಎಣಿಸಬೇಕಾಗಿಲ್ಲ.






ನಂದಿನಿ ಕೊಟ್ಟ ಸಮಸ್ಯೆಯನ್ನು ಚಿತ್ರಿಸಿದ್ದಾಳೆ.



ನಿಮ್ಮ ಪ್ರಕಾರ ಅಂದಾಜು ಕ್ಯಾರೆಟ್‌ಗಳು .....

ಕ್ಯಾರೆಟ್‌ಗಳ ಸರಿಯಾದ ಸಂಖ್ಯೆಯನ್ನು ತೋರಿಸುವ ಕಡ್ಡಿಗಳ ಕಟ್ಟುಗಳಿಗೆ ವೃತ್ತ ಹಾಕಿ.



ಮೇಲಿನ ಸಮಸ್ಯೆಯನ್ನು ಸಂಖ್ಯಾರೇಖೆಯಲ್ಲಿ ಬಿಡಿಸಿ.



..... ಟೊಮೆಟೊಗಳು ಮತ್ತು ..... ಕ್ಯಾರೆಟ್‌ಗಳು ಒಟ್ಟು ..... ತರಕಾರಿಗಳು

..... + ... = 100

..... ಟೊಮೆಟೊಗಳನ್ನು 100 ತರಕಾರಿಗಳಿರುವ ಪೆಟ್ಟಿಗೆಯಿಂದ ಹೊರತೆಗೆದಾಗ ಉಳಿಯುವ ಕ್ಯಾರೆಟ್‌ಗಳು = ...


100 – ..... = ...




ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು ಹೇಗೆ ಅಂದಾಜಿಸಿ, ಉತ್ತರಿಸಿದರು ಎಂಬುದನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸಿ.

ನಂದಿನಿ ಮತ್ತು ಚಿರಾಗ್‌ಗೆ ಹಣ್ಣಾದ ಸೇಬುಗಳನ್ನು ಕಿತ್ತು ತರಲು ಅಜ್ಜಿ ಹೇಳುತ್ತಾರೆ.

ಓಹೋ! ಬೇಕಾದಷ್ಟಿವೆ.




ನಾವು ಒಟ್ಟು ಎಷ್ಟು ಸೇಬುಗಳನ್ನು ಸಂಗ್ರಹಿಸಿದ್ದೇವೆ. ನೋಡೋಣ.



ಮುಂದಿನ ಸಮಸ್ಯೆ ಬಿಡಿಸಲು ಬಾಕ್ಸ್ ಚಿತ್ರವನ್ನು ಬರೆಯಿರಿ.

80 ಮತ್ತು 20 ಅಂದರೆ 100. ಹಾಗಾಗಿ ಒಟ್ಟಾರೆ ಅವು 100 ಕ್ಕಿಂತ ಹೆಚ್ಚಿವೆ.



ಒಟ್ಟು ಎಷ್ಟು ಸೇಬುಗಳಿವೆ?

ಮುಂದಿನ ಸಂಖ್ಯಾರೇಖೆಯಲ್ಲಿ ಉತ್ತರವನ್ನು ಕಂಡುಹಿಡಿಯಲು ಪ್ರಯತ್ನಿಸಿ.





85 ಸೇಬುಗಳು + 67 ಸೇಬುಗಳು = ◯ ಸೇಬುಗಳು

85 + 67 = ◯


ನಂದಿನಿ ಅಥವಾ ಚಿರಾಗ್ ಇವರಲ್ಲಿ ಯಾರು ಹೆಚ್ಚು ಸಂಗ್ರಹಿಸಿದರು? ಎಷ್ಟು ಹೆಚ್ಚು?

ಚಿರಾಗ್ ಸಮಸ್ಯೆ ಬಿಡಿಸಲು ಒಂದು ಬಾಕ್ಸ್ ಚಿತ್ರವನ್ನು ಚಿತ್ರಿಸುತ್ತಾನೆ.






ನಂದಿನಿಯ ಸೇಬುಗಳು



ಚಿರಾಗ್‌ನ ಸೇಬುಗಳು



..... ಗಿಂತ ..... ಸೇಬುಗಳನ್ನು ಹೆಚ್ಚಾಗಿ ..... ಸಂಗ್ರಹಿಸಿದ್ದಾರೆ.



ಶಿಕ್ಷಕರಿಗೆ ಟಿಪ್ಪಣಿ: ಅಂತಹ ಇನ್ನೂ ಹೆಚ್ಚಿನ ವಾಕ್ಯ ರೂಪದ ಸಮಸ್ಯೆಗಳನ್ನು ಸೃಜಿಸಿ. ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿಕೊಂಡು, ಅವುಗಳನ್ನು ರಚಿಸಿ ಮತ್ತು ಪರಿಹರಿಸಲು ಮಕ್ಕಳಿಗೆ ಅವಕಾಶ ಕಲ್ಪಿಸಿ.

ಮೊದಲು ಬಾಕ್ಸ್ ಚಿತ್ರಗಳನ್ನು ರಚಿಸಿ ಮುಂದಿನ ಸಮಸ್ಯೆಗಳನ್ನು ಬಿಡಿಸಿ. ಬೆಂಕಿಕಡ್ಡಿ ಕಟ್ಟುಗಳು ಅಥವಾ ಸಂಖ್ಯಾರೇಖೆಯನ್ನು ಬಳಸಿ ಉತ್ತರವನ್ನು ಕಂಡುಹಿಡಿಯಿರಿ.

1. ಬಬ್ಲಿ ಅಕ್ಕ ಸೋಮವಾರ 34 ಪುಸ್ತಕಗಳು ಮತ್ತು ಮಂಗಳವಾರ 45 ಪುಸ್ತಕಗಳನ್ನು ಮಾರಿದಳು. ಎರಡು ದಿನಗಳಲ್ಲಿ ಅವಳು ಎಷ್ಟು ಪುಸ್ತಕಗಳನ್ನು ಮಾರಾಟ ಮಾಡಿದಳು? ಸೋಮವಾರಕ್ಕಿಂತ ಮಂಗಳವಾರ ಎಷ್ಟು ಹೆಚ್ಚು ಮಾರಾಟ ಮಾಡಿದ್ದಾಳೆ?

2. ರೋಸರಿ ಶಾಲೆಯಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆಂಪು ತಂಡವು ಊಟದ ಮೊದಲು 56 ರನ್ ಗಳಿಸಿತು. ಊಟದ ನಂತರ 65 ರನ್ ಗಳಿಸಿತು. ಅವರು ಒಟ್ಟು ಎಷ್ಟು ರನ್ ಗಳಿಸಿದರು?

3. ರಮಾ ಶಾಲೆಯ ಕ್ಯಾಂಟೀನ್‌ನಲ್ಲಿ ವಡೆಗಳನ್ನು ಮಾರುತ್ತಾಳೆ. ಅವಳು ಮೊದಲ ದಿನ 39 ವಡೆಗಳನ್ನು ಮಾರಿದಳು. ಅವರು ಮರುದಿನ 12 ವಡೆಗಳನ್ನು ಹೆಚ್ಚಾಗಿ ಮಾರುತ್ತಾಳೆ. ಈ ಎರಡು ದಿನಗಳಲ್ಲಿ ಅವಳು ಎಷ್ಟು ವಡೆಗಳನ್ನು ಮಾರಾಟ ಮಾಡಿದಳು?

4. ಗೇಹು ತನ್ನ ಟೆರೇಸ್‌ನಲ್ಲಿನ ತೋಟಕ್ಕೆ 56 ಗಿಡಗಳನ್ನು ತರುತ್ತಾಳೆ. ಅವುಗಳಲ್ಲಿ ಕೆಲವು ಸಸ್ಯಗಳು ಒಣಗಿದ್ದವು. ಅವಳಲ್ಲಿ 29 ಸಸ್ಯಗಳು ಉಳಿದಿವೆ. ಒಣಗಿದ್ದ ಸಸ್ಯಗಳು ಎಷ್ಟು?

5. ಎರಡು ಸಂಖ್ಯೆಗಳನ್ನು ಆರಿಸಿ. ಆ ಎರಡು ಸಂಖ್ಯೆಗಳನ್ನು ಬಳಸಿ ಒಂದು ವಾಕ್ಯ ರೂಪದ ಸಮಸ್ಯೆಯನ್ನು ಮಾಡಿ. ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.

.....

.....



ನಾವು ಆಡೋಣ

ಈ ಆಟವನ್ನು ಇಬ್ಬರು ಮಕ್ಕಳ ನಡುವೆ ಆಡಿಸಬೇಕು. ಮೊದಲ ಆಟಗಾರ 1 ಮತ್ತು 10 ರ ನಡುವಿನ ಒಂದು ಸಂಖ್ಯೆಯನ್ನು ಹೇಳಬೇಕು. ಎರಡನೇ ಆಟಗಾರ 1 ಮತ್ತು 10 ರ ನಡುವಿನ ಒಂದು ಸಂಖ್ಯೆಗೆ ಮೊದಲ ಆಟಗಾರ ಹೇಳಿದ ಸಂಖ್ಯೆಯನ್ನು ಕೂಡುತ್ತಾನೆ. ಮೊದಲ ಆಟಗಾರ ಮತ್ತೆ 1 ರಿಂದ 10 ರೊಳಗಿನ ಒಂದು ಸಂಖ್ಯೆಗೆ ಮೊದಲಿನ ಮೊತ್ತವನ್ನು ಕೂಡುತ್ತಾನೆ. ಮೊದಲು 100 ನ್ನು ತಲುಪಿದ ಆಟಗಾರ ವಿಜೇತನಾಗುತ್ತಾನೆ. ಒಂದು ಉದಾಹರಣೆಯನ್ನು ಇಲ್ಲಿ ನೀಡಲಾಗಿದೆ:

1 ನೇ ಆಟಗಾರ ಈ ಸುತ್ತನ್ನು ಗೆಲ್ಲುತ್ತಾನೆ!

ನಿಮ್ಮ ಸ್ನೇಹಿತರೊಂದಿಗೆ ಈ ಆಟವನ್ನು ಆಡಿ.

ಆಟಗಾರ 1	ಆಟಗಾರ 2	ಒಟ್ಟು
9		9
	10	19
8		27
	9	36
10		46
	8	54
10		64
	10	74
9		83
	7	90
10		100



ನಾವು ಮಾಡೋಣ

1. ಉತ್ತರವನ್ನು ಅಂದಾಜು ಮಾಡಿ, ಅದು 100 ಕ್ಕಿಂತ ಹೆಚ್ಚು ಅಥವಾ ಕಡಿಮೆ ಇದೆಯೇ ಹೇಳಿ. ಸರಿಯಾದುದರೊಂದಿಗೆ ಹೊಂದಿಸಿ.




150 – 50 ಅಂದರೆ 100 ಆದ್ದರಿಂದ, 150 – 49 ಅಂದರೆ 100 ಕ್ಕಿಂತ ಹೆಚ್ಚು

134 – 56	100 ಕ್ಕಿಂತ ಹೆಚ್ಚು
20 + 41	
150 – 49	
199 – 90	100 ಕ್ಕಿಂತ ಕಡಿಮೆ
70 + 30 + 1	
156 – 65	

68 – 26
95 + 10 + 5
109 – 80
63 + 26
124 + 23 + 20

2. ಸಂಖ್ಯಾರೇಖೆಯನ್ನು ಬಳಸಿ ಮೇಲಿನ ಸಮಸ್ಯೆಗಳನ್ನು ಬಿಡಿಸಿ. ಸಮಸ್ಯೆಯ ಪಕ್ಕದಲ್ಲಿ ಉತ್ತರವನ್ನು ಬರೆಯಿರಿ.






ಶಿಕ್ಷಕರಿಗೆ ಟಿಪ್ಪಣಿ: ಸಂಖ್ಯಾ ರೇಖೆಯು ಯಾವುದೇ ಸಂಖ್ಯೆಯಿಂದ ಆರಂಭವಾಗಬಹುದು ಎಂಬುದನ್ನು ಗಮನಿಸಿ. ಅಗತ್ಯಕ್ಕೆ ತಕ್ಕಂತೆ ಎರಡು ಸಂಖ್ಯೆಗಳ ನಡುವಿನ ದೂರವನ್ನು ಬದಲಾಯಿಸಿಕೊಳ್ಳಬಹುದು. ಮಕ್ಕಳೂ ಸಹ, ಎರಡು ಸಂಖ್ಯೆಗಳ ನಡುವೆ ಸಮ ಅಂತರವಿಲ್ಲದಂತೆ ಸಂಖ್ಯಾರೇಖೆಯನ್ನು ಮಾಡಬಹುದು. ಸಂಖ್ಯಾರೇಖೆಯ ಮೇಲೆ ತಾವು ಪರಿಗಣಿಸುತ್ತಿರುವ ಜಿಗಿತಗಳನ್ನು ಬರೆಯಲು ಅವರಿಗೆ ತಿಳಿಸಬೇಕು.

5 ಆಕೃತಿಗಳೊಂದಿಗೆ ವಿನೋದ

W6U5J5







ನಾವು ಮಾಡೋಣ


1. ಇಲ್ಲಿ ಕೊಟ್ಟಿರುವ ಚುಕ್ಕೆಗಳ ಮೇಲೆ ಅಮ್ಮನ ರಂಗೋಲಿಯನ್ನು ಬಿಡಿಸಿ.





2. ಅಮ್ಮ ಬಿಡಿಸಿದ ರಂಗೋಲಿಯಲ್ಲಿ ಇರುವ ಆಕೃತಿಗಳನ್ನು ಹೆಸರಿಸಿ.

_____, _____, _____




3. ಇವುಗಳಿಂದ ಮಾಡಲ್ಪಟ್ಟಿರುವ ಆಕೃತಿಗಳು ಎಷ್ಟಿವೆ?

(i) ವಕ್ರ ರೇಖೆಗಳು _____


(ii) ಸರಳ ರೇಖೆಗಳು _____

4. ಒಂದು ರಂಗೋಲಿ ವಿನ್ಯಾಸ ಮಾಡಲು ಆಕೃತಿಗಳ ಅಚ್ಚನ್ನು ಬಳಸಿ. ಹೊರರೇಖೆ ಎಳೆದು ಬಣ್ಣ ತುಂಬಿರಿ.

5. ಆಕೃತಿಗಳ ಅಚ್ಚನ್ನು ಬಳಸಿ ಮುಂದಿನ ವಸ್ತುಗಳನ್ನು ಮಾಡಲು ಪ್ರಯತ್ನಿಸಿ.








*Early Mathematics Kit (NCERT) ನ್ನು ಬಳಸಬಹುದು.



ಶಿಕ್ಷಕರಿಗೆ ಟಿಪ್ಪಣಿ: ಆಕೃತಿಗಳ ಕಟೌಟ್‌ಗಳನ್ನು ಕ್ರಿಯಾಶೀಲವಾಗಿ ಬಳಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಮಕ್ಕಳು ಎರಡು ರಂಗೋಲಿಗಳನ್ನು ಹೋಲಿಸಿ ಅವುಗಳಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ತಿಳಿಯಲಿ.

ನಾವು ಮಾಡೋಣ




1. ಕೆಲವು ರಟ್ಟಿನ ಪೆಟ್ಟಿಗೆಗಳನ್ನು ಸಂಗ್ರಹಿಸಿ ಮತ್ತು ಅವುಗಳನ್ನು ಎಚ್ಚರಿಕೆಯಿಂದ ತೆರೆಯಿರಿ. ಚಪ್ಪಟೆಯಾದ ಪೆಟ್ಟಿಗೆಗಳಲ್ಲಿ ನೀವು ಯಾವ ಆಕಾರಗಳನ್ನು ಗಮನಿಸುವಿರಿ?




2. ಒಂದು ಲಕೋಟೆಯನ್ನು ಮಾಡಿ. ಒಂದು ಚೌಕಾಕಾರದ ಕಾಗದವನ್ನು ತೆಗೆದುಕೊಂಡು ಚಿತ್ರದಲ್ಲಿ ತೋರಿಸಿರುವಂತೆ ಮಡಚಿ.


1




2



3



4






ಶಿಕ್ಷಕರಿಗೆ ಟಿಪ್ಪಣಿ: ಪೆಟ್ಟಿಗೆಯನ್ನು ತೆರೆದು ಅದರಲ್ಲಿನ ಮುಖಗಳ ಸಂಖ್ಯೆ ಮತ್ತು ಆಕಾರಗಳನ್ನು ಗಮನಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಮಕ್ಕಳು ಕಾಗದದಿಂದ ಸಿಲಿಂಡರ್ ಮತ್ತು ಶಂಕುಗಳನ್ನು ಮಾಡಲಿ, ಘನ ಮತ್ತು ಆಯತ ಘನವನ್ನು ಪುಸ್ತಕದ ಕೊನೆಯಲ್ಲಿ ನೀಡಿರುವ ಜಾಲಗಳಿಂದ ಮಾಡಲಿ.

ಬಿಸ್ಕತ್‌ಗಳನ್ನು ತಯಾರಿಸುವುದು







ಇಬ್ಬರು ಮಕ್ಕಳು ವಿಭಿನ್ನ ಆಕಾರಗಳನ್ನು ಏಕೆ ಪಡೆದರು? ಚರ್ಚಿಸಿ.

ಆಯತಾಕಾರದ ಮುಖಗಳನ್ನು ಹೊಂದಿರುವ ಯಾವುದೇ ಮೂರು ವಸ್ತುಗಳನ್ನು ಹೆಸರಿಸಿ.

_____, _____, _____



ನಾವು ಮಾಡೋಣ

1. ಯಾವುದೇ ಆಯತ ಘನಾಕೃತಿಯ ವಸ್ತುವಿನ ಎಲ್ಲಾ ಮುಖಗಳನ್ನು ಟ್ರೇಸ್‌ಮಾಡಿ. (ಉದಾಹರಣೆಗೆ ಕಟರ್ (ಹರಿತವಾದ ಸಾಧನ) ಅಥವಾ ಎರೇಸರ್)

(a) ನೀವು ಎಷ್ಟು ವಿಭಿನ್ನ ಮುಖಗಳನ್ನು ಪಡೆದಿರುವಿರಿ? _____

(b) ಈ ಮುಖಗಳು ಯಾವ ಆಕಾರಗಳಾಗಿವೆ? _____


(c) ನೀವು ಒಂದು ಚೌಕವನ್ನು ಪಡೆದಿದ್ದೀರಾ? _____

(d) ಆಯತ ಘನಾಕೃತಿಯನ್ನು ಟ್ರೇಸ್ ಮಾಡಿದಾಗ ನೀವು ಆರು ವಿಭಿನ್ನ ಆಯತಗಳನ್ನು ಪಡೆಯಬಹುದೆ? _____

(e) ಆಯತ ಘನಾಕೃತಿಯ ಮುಖ ತ್ರಿಭುಜಾಕಾರದಲ್ಲಿರಬಹುದೇ? _____

(f) ಆಯತ ಘನಾಕೃತಿಯ ಮುಖಗಳು _____ ಅಥವಾ _____ ಆಕಾರದಲ್ಲಿವೆ.

2. ಮುಂದೆ ನೀಡಿರುವ ಬದಿಗಳನ್ನು ಬಳಸಿಕೊಂಡು ಆಯತಗಳನ್ನು ರಚಿಸಿ.





3. ಈ ಚಿಕ್ಕ ಆಯತದ ಸುತ್ತಲೂ 3 ದೊಡ್ಡ ಆಯತಗಳನ್ನು ರಚಿಸಿ.









ಶಿಕ್ಷಕರಿಗೆ ಟಿಪ್ಪಣಿ: 4 ಕಡ್ಡಿಗಳಿಂದ ಒಂದು ಆಯತವನ್ನು ನಿರ್ಮಿಸಲು ಮಕ್ಕಳಿಗೆ ಅವಕಾಶ ನೀಡಿ. ಆಯತದ ಬಗ್ಗೆ ಅಂತಃಪ್ರಜ್ಞೆಯನ್ನು ಮಕ್ಕಳು ಬೆಳೆಸಿಕೊಂಡಿದ್ದಾರೆಯೇ ಎಂಬುದನ್ನು ಗಮನಿಸಿ. ಆಯತ ಪದವನ್ನು ಪರಿಚಯಿಸಿ. ಚುಕ್ಕೆ ಗ್ರಿಡ್ ಮೇಲೆ ವಿವಿಧ ಗಾತ್ರದ ಆಯತಗಳನ್ನು, ಬೇರೆ ಬೇರೆ ಓರೆ / ದಿಕ್ಕುಗಳಲ್ಲಿ ರಚಿಸಲು ಅವಕಾಶಗಳನ್ನು ಒದಗಿಸಿ.

4. ಮುಂದಿನ ಚಿತ್ರದಲ್ಲಿರುವ ಆಯತಗಳ ಸಂಖ್ಯೆಯನ್ನು ಎಣಿಸಿ ಬರೆಯಿರಿ.



5. ಮುಂದೆ ನೀಡಿರುವ ವಿವಿಧ ಆಯತಗಳನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸಿ.



(a) ಒಂದು ಆಯತದಲ್ಲಿ ಎಷ್ಟು ಬಾಹುಗಳಿವೆ? _____


(b) ಒಂದು ಆಯತದಲ್ಲಿ ಎಷ್ಟು ಮೂಲೆಗಳಿವೆ? _____

(c) ಒಂದು ಆಯತದಲ್ಲಿ ಪರಸ್ಪರ ಸಮಾನ ಉದ್ದವಿರುವ ಯಾವುದೇ ಬಾಹುಗಳಿವೆಯೆ? _____

(d) ಆಯತದಲ್ಲಿ ನೀವು ಏನನ್ನು ಗಮನಿಸಿದಿರಿ? ಅದನ್ನು ನಿಮ್ಮ ಸ್ವಂತ ಪದಗಳಲ್ಲಿ ವಿವರಿಸಿರಿ.


ಸಮ ಸಮ





1. ಎರಡೂ _____ ಬಾಹುಗಳನ್ನು ಹೊಂದಿವೆ.

2. ಎರಡೂ _____ ಮೂಲೆಗಳನ್ನು ಹೊಂದಿವೆ.



ಈ ರೇಖಾಚಿತ್ರದಲ್ಲಿ ನೀವು ಎಷ್ಟು ಚೌಕಗಳನ್ನು ಗಮನಿಸುವಿರಿ?




ಶಿಕ್ಷಕರಿಗೆ ಟಿಪ್ಪಣಿ: 4 ಕಡ್ಡಿಗಳಿಂದ ಚೌಕವನ್ನು ಮಾಡಲು ಮಕ್ಕಳಿಗೆ ಅವಕಾಶ ನೀಡಿ. ಚೌಕ ಮತ್ತು ಲಂಬ ಕೋನದ ಬಗ್ಗೆ ಮಕ್ಕಳು ಅಂತಃಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾರೆಯೇ ಎಂಬುದನ್ನು ಗಮನಿಸಿ.




ನಾವು ಮಾಡೋಣ

1. ಇಲ್ಲಿ ಒಂದು ಚೌಕವಿದೆ. ಈ ಚೌಕದ ಸುತ್ತಲೂ ಎರಡು ದೊಡ್ಡ ಚೌಕಗಳನ್ನು ರಚಿಸಿ.



2. ಎಲ್ಲಾ ಬದಿಗಳಲ್ಲಿ ಚೌಕಗಳು ಇರುವಂತೆ ಬೆಂಕಿಕಡ್ಡಿಗಳಿಂದ ಒಂದು ಚೌಕವನ್ನು ಮಾಡಿ. ಒಟ್ಟು ಎಷ್ಟು ಚೌಕಗಳನ್ನು ನೀವು ಪಡೆದಿರಿ?

3. ಮುಂದೆ ನೀಡಿರುವ ಬಾಹುಗಳನ್ನು ಬಳಸಿ ಚೌಕಗಳನ್ನು ಪೂರ್ಣಗೊಳಿಸಿ.



4. ಈ ಚಟುವಟಿಕೆಯನ್ನು ಮಾಡಲು ಪುಸ್ತಕದ ಕೊನೆಯಲ್ಲಿ ನೀಡಿರುವ ಚೌಕದ ತುಂಡುಗಳನ್ನು ಬಳಸಿ.

ನೀವು ಈ ರೀತಿ ಜೋಡಿಸಿ ಎಷ್ಟು ವಿವಿಧ ಆಕೃತಿಗಳನ್ನು ಮಾಡುವಿರಿ?

(a) 2 ಚೌಕಗಳು

(b) 3 ಚೌಕಗಳು


(c) 4 ಚೌಕಗಳು

ಅವುಗಳನ್ನು ಚುಕ್ಕೆಗಳ ಗ್ರಿಡ್‌ನಲ್ಲಿ ತೋರಿಸಿ. ಪುಸ್ತಕದ ಹಿಂಭಾಗದಲ್ಲಿ ಕೆಲವು ಚುಕ್ಕೆ ಗ್ರಿಡ್‌ಗಳನ್ನು ನೀಡಲಾಗಿದೆ.



ನಾವು ಅನ್ವೇಷಿಸೋಣ


1. ಆಯತಗಳಾಗಿರುವ ಆಕೃತಿಗಳಿಗೆ ✓ ಗುರುತು ಹಾಕಿ.



ಯಾವ ಚಿತ್ರಗಳು ಆಯತಗಳಾಗಿಲ್ಲ? ಏಕೆ? ವಿವರಿಸಿ.

2. ಮೂಲೆಗಳ ಸಂಖ್ಯೆ ಅಷ್ಟೇ ಇರುವಂತೆ ನೀವು ಒಂದು ಚೌಕಾಕಾರದ ಹಾಳೆಯ ಎಲ್ಲ ಮೂಲೆಗಳನ್ನು ಮಡಚಬಲ್ಲಿರಾ?

3. ರಟ್ಟಿನ ಹಾಳೆಯ ಮೇಲೆ ಚೌಕವನ್ನು ಮಾಡಿ. 4 ತ್ರಿಭುಜಗಳನ್ನು ಪಡೆಯಲು ಚೌಕದ ಮೇಲೆ ತೋರಿಸಿರುವಂತೆ ಗುರುತು ಮಾಡಿದ ಚುಕ್ಕೆ ಗೆರೆಗಳ ಉದ್ದಕ್ಕೂ ಕತ್ತರಿಸಿ. ಮೂರು ತ್ರಿಭುಜಗಳನ್ನು ಒಟ್ಟಿಗೆ ಸೇರಿಸುವ ಮೂಲಕ ಸಾಧ್ಯವಾದಷ್ಟು ಅನೇಕ ಬೇರೆ ಬೇರೆ ಆಕೃತಿಗಳನ್ನು ಮಾಡಿ. ನೀವು ಎಷ್ಟು ಆಕೃತಿಗಳನ್ನು ಮಾಡಬಹುದು?



ಈಗ ಒಟ್ಟಿಗೆ ನಾಲ್ಕು ತ್ರಿಭುಜಗಳೊಂದಿಗೆ ಪ್ರಯತ್ನಿಸಿ.

ಚೌಕ ಮೂಲೆಗಳು



ಚೌಕದ ಎಲ್ಲಾ ಮೂಲೆಗಳು ಒಂದೇ ಆಗಿವೆಯೇ? _____

ನಿಮಗೆ ಹೇಗೆ ತಿಳಿಯಿತು?

ಕೆಲವು ಚೌಕಗಳನ್ನು ಒಂದರ ಮೇಲೊಂದು ಇಟ್ಟು ನೋಡಿ.


ಆಯತದ ಮೂಲೆಗಳು ಒಂದೇ ಆಗಿವೆಯೇ?


ನಿಮಗೆ ಹೇಗೆ ತಿಳಿಯಿತು?

ಕೆಲವು ಆಯತಗಳನ್ನು ಒಂದರ ಮೇಲೊಂದು ಇಟ್ಟು ನೋಡಿ.

ಚೌಕ ಮತ್ತು ಆಯತದ ಮೂಲೆಗಳು ಒಂದೇ ಆಗಿವೆಯೇ?


ನಿಮ್ಮ ತರಗತಿಯಲ್ಲಿ ಚೌಕಾಕಾರದ ಮೂಲೆಗಳಿರುವ ಕೆಲವು ವಸ್ತುಗಳನ್ನು ಹೆಸರಿಸಿ._____






ನಾವು ಮಾಡೋಣ


ವಿಭಿನ್ನ ಮೂಲೆಗಳನ್ನು ತೋರಿಸಲು ನೀವು ಎರಡು ಕಾಗದದ ಪಟ್ಟಿಗಳನ್ನು ಸೇರಿಸಬಹುದು.



ಚೌಕ ಮೂಲೆಗಿಂತ ಕಡಿಮೆ



ಚೌಕ ಮೂಲೆ




ಚೌಕ ಮೂಲೆಗಿಂತ ಹೆಚ್ಚು

ಪಟ್ಟಿಗಳನ್ನು ಬಳಸಿ ಚೌಕ ಮೂಲೆ, ಚೌಕ ಮೂಲೆಗಿಂತ ಹೆಚ್ಚು, ಚೌಕ ಮೂಲೆಗಿಂತ ಕಡಿಮೆ ತೋರಿಸಿ.

ನಿಮ್ಮ ಮೇಜಿನ ಮೂಲೆಗಳು ಮತ್ತು ಬೋರ್ಡ್‌ನ ಮೂಲೆಗಳು ಚೌಕ ಮೂಲೆಗಳಾಗಿವೆಯೇ ಎಂಬುದನ್ನು ಪರಿಶೀಲಿಸಲು ಪಟ್ಟಿಗಳನ್ನು ಬಳಸಬಲ್ಲಿರಾ?

1. ಈ ಆಕೃತಿಗಳಲ್ಲಿ ಚೌಕ ಮೂಲೆಗಳನ್ನು ಗುರುತಿಸಿ.



2. ಕೆಲವು ಚೌಕಗಳನ್ನು ಮಾಡಲು ಚುಕ್ಕೆಗಳನ್ನು ಸೇರಿಸಿ.
ನೀವು ಎಷ್ಟು ವಿಭಿನ್ನ ಚೌಕಗಳನ್ನು ಪಡೆದಿರಿ?



ಶಿಕ್ಷಕರಿಗೆ ಟಿಪ್ಪಣಿ: ಒಂದೇ ಒಂದು ಚೌಕಾಕಾರದ ಮೂಲೆಯಿರುವ ಆಕೃತಿ, ಒಂದು ಚೌಕಾಕಾರದ ಮೂಲೆಗಿಂತ ಕಡಿಮೆ ಇರುವ ಆಕೃತಿಗಳು ಮತ್ತು ಒಂದಕ್ಕಿಂತ ಹೆಚ್ಚು ಚೌಕಾಕಾರದ ಮೂಲೆಯಿರುವ ಆಕೃತಿಗಳನ್ನು ವರ್ಗೀಕರಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಕೆಲವು ಆಕೃತಿಗಳಲ್ಲಿ ಒಂದಕ್ಕಿಂತ ಹೆಚ್ಚು ವಿಧದ ಮೂಲೆಯಿರಬಹುದು. ಬೆಂಕಿಕಡ್ಡಿಗಳನ್ನು ಉಪಯೋಗಿಸಿಕೊಂಡು ಅಂತಹ ಆಕೃತಿಗಳನ್ನು ಮಾಡಿ.


3. ಮುಂದೆ ನೀಡಿರುವ ಚಿತ್ರವನ್ನು ಗಮನಿಸಿ ಮುಂದಿನವುಗಳಿಗೆ ಉತ್ತರಿಸಿ.

a. ಮೂಲೆಗಳ ಸಂಖ್ಯೆಯನ್ನು ಎಣಿಸಿ ಬರೆಯಿರಿ.


b. ಚೌಕ ಮೂಲೆಗಳಿಗೆ ವೃತ್ತ ಹಾಕಿ.




4. ಎರಡು ಬೆಂಕಿಕಡ್ಡಿಗಳಿಂದ ಎರಡು ಚೌಕ ಮೂಲೆ ಮತ್ತು ನಾಲ್ಕು ಚೌಕ ಮೂಲೆಗಳನ್ನು ಮಾಡಿ. ಮುಂದೆ ಕೊಟ್ಟಿರುವ ಜಾಗದಲ್ಲಿ ಚಿತ್ರಿಸಿ ತೋರಿಸಿ.



5. ಮುರುಗನ್ 10 ಬೆಂಕಿಕಡ್ಡಿಗಳಿಂದ ಮೂರು ಚೌಕಗಳನ್ನು ಮಾಡಿದನು. 12 ಬೆಂಕಿಕಡ್ಡಿಗಳಿಂದ ನೀವು ಎಷ್ಟು ಚೌಕಗಳನ್ನು ಮಾಡಬಹುದು?



ತ್ರಿಭುಜ – ತ್ರಿಭುಜ... ಹಲವು ತ್ರಿಭುಜಗಳು



ತ್ರಿಭುಜವನ್ನು ವಿವರಿಸಿ


ತ್ರಿಭುಜಗಳು _____ ಬಾಹುಗಳನ್ನು ಹೊಂದಿವೆ. ಅವುಗಳಿಗೆ_____ ಮೂಲೆಗಳಿವೆ.



ನಾವು ಮಾಡೋಣ

1. ನಿಮ್ಮ ಸುತ್ತಲೂ ಕಾಣುವ ಕೆಲವು ತ್ರಿಭುಜಾಕಾರದ ವಸ್ತುಗಳನ್ನು ನೋಟ್‌ಪುಸ್ತಕದಲ್ಲಿ ಚಿತ್ರಿಸಿ, ಹೆಸರಿಸಿ.


2. ನೀಡಿರುವ ರಂಗೋಲಿಯಲ್ಲಿ ತ್ರಿಭುಜಗಳ ಸಂಖ್ಯೆಯನ್ನು ಎಣಿಸಿ.

(a) 


(b) 

_____ _____

3. ಈ ವೃತ್ತದ ಮೇಲಿನ ಚುಕ್ಕೆಗಳನ್ನು ಬಳಸಿ ಎಷ್ಟು ವಿಭಿನ್ನ ತ್ರಿಭುಜಗಳನ್ನು ಮಾಡಬಹುದು?




4. ಎರಡು ಕಡ್ಡಿಗಳನ್ನು ಸರಿಸಿ ಒಂದು ತ್ರಿಭುಜವನ್ನು ಎರಡು ತ್ರಿಭುಜಗಳಾಗಿ ಮಾಡಿ.





ಶಿಕ್ಷಕರಿಗೆ ಟಿಪ್ಪಣಿ: ವಿವಿಧ ತ್ರಿಭುಗಳನ್ನು ಸೃಜಿಸಲು ಕಾಗದವನ್ನು ಮಡಚುವುದು ಮತ್ತು ಕತ್ತರಿಸುವುದನ್ನು ಉಪಯೋಸಿಕೊಳ್ಳಬೇಕು.

ಕಡ್ಡಿಗಳು ಮತ್ತು ಮಣ್ಣಿನಿಂದ ತ್ರಿಭುಜಗಳನ್ನು ನಿರ್ಮಿಸುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸಬೇಕು.



ನಾವು ಚರ್ಚಿಸೋಣ

1. ನೀವು ಸರ್ಕಸ್‌ಗೆ ಹೋಗಿದ್ದೀರಾ?

2. ವೃತ್ತವು ಹೇಗೆ ಕಾಣುತ್ತದೆ? ವೃತ್ತವು ಆಯತಕ್ಕಿಂತ ಹೇಗೆ ಭಿನ್ನವಾಗಿದೆ?

ನಾವು ಮಾಡೋಣ

1. ವೃತ್ತದಂತೆ ಇರುವ ಕೆಲವು ವಸ್ತುಗಳನ್ನು ಹೆಸರಿಸಿ.

_____

2. ವರ್ಣರಂಜಿತ ವೃತ್ತಗಳನ್ನು ಎಳೆದು ಸರ್ಕಸ್ ದೃಶ್ಯವನ್ನು ಪೂರ್ಣಗೊಳಿಸಿ.








3. ನಿಮ್ಮ ನೋಟ್ ಪುಸ್ತಕದಲ್ಲಿ ಬಾಟಲ್ ಮುಚ್ಚಳ, ಬಳೆಗಳು ಮತ್ತು ಉಂಗುರಗಳನ್ನು ಟ್ರೇಸ್‌ಮಾಡಿ ವೃತ್ತಗಳನ್ನು ಎಳೆಯಿರಿ.

ಮಕ್ಕಳು ಒಂದು ಆಟವನ್ನು ಆಡುತ್ತಿದ್ದಾರೆ. ಅವರು ನೆಲದ ಮೇಲೆ ವೃತ್ತವನ್ನು ರಚಿಸಿದ್ದಾರೆ.

ನೀವು ವೃತ್ತವನ್ನು ಎಳೆಯಬೇಕಾಗಿರುವ ಯಾವುದಾದರೂ ಆಟವನ್ನು ಆಡಿದ್ದೀರಾ? _____

ಆಟದ ಮೈದಾನದಲ್ಲಿ ವೃತ್ತವನ್ನು ರಚಿಸಲು ಪ್ರಯತ್ನಿಸಿ.






ಒಂದು ಪೇಪರ್ ಪ್ಲೇಟ್ ತೆಗೆದುಕೊಂಡು ಅದನ್ನು ಮಕ್ಕಳು ಮಾಡಿದಂತೆ ಅರ್ಧಕ್ಕೆ ಮಡಚೋಣ.


ರೇಖೆಗಳು ಸಂಧಿಸುವ ಬಿಂದುವೇ ವೃತ್ತ ಕೇಂದ್ರವಾಗಿದೆ.


ಕೆಲವು ವೃತ್ತಾಕಾರದ ಆಕೃತಿಗಳಿಂದ ಗೊಂಬೆಗಳನ್ನು ಮಾಡಿ, ಅವುಗಳೊಂದಿಗೆ ಆಟವಾಡಿ.



ನಾವು ಮಾಡೋಣ

1. ಈ ಎರಡು ಆಕೃತಿಗಳನ್ನು ನೋಡಿ. ಅವುಗಳಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ಚರ್ಚಿಸಿ. ಸರಿಯಾದ ಪದಕ್ಕೆ ✓ ಗುರುತು ಹಾಕಿ.









a. ಅವುಗಳ ಮೂಲೆಗಳು: ಸಮ ○ ಭಿನ್ನ ○

b. ಅವುಗಳ ಬಾಹುಗಳ ಸಂಖ್ಯೆ: ಸಮ ○ ಭಿನ್ನ ○


2. ಯಾವುದಾದರೂ ಎರಡು ಆಕೃತಿಗಳನ್ನು ಆಯ್ಕೆ ಮಾಡಿ. ಅವುಗಳಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.



3. ಈ ಆಕೃತಿಗಳಲ್ಲಿ ಅತೀ ದೊಡ್ಡದಾದ ಆಯತವನ್ನು ಕಂಡುಹಿಡಿಯಿರಿ.



4. ನಾನು ಒಂದು ತ್ರಿಭುಜವನ್ನು ಮಾಡಿದೆ. ನಂತರ ನಾನು ತ್ರಿಭುಜಗಳ ಇನ್ನೊಂದು ಅಡ್ಡಸಾಲನ್ನು ಮಾಡಿದೆ.





ಎರಡನೇ ಚಿತ್ರದಲ್ಲಿ ಎಷ್ಟು ತ್ರಿಭುಜಗಳಿವೆ? _____

ನಾನು ಮತ್ತೊಂದು ಅಡ್ಡಸಾಲನ್ನು ರಚಿಸಿದರೆ, ಮೂರನೇ ಚಿತ್ರದಲ್ಲಿ ಎಷ್ಟು ತ್ರಿಭುಜಗಳಿರುತ್ತವೆ?

_____

5. ಇಲ್ಲಿ ಹರಿದು ಹೋಗಿರುವ ಕೆಲವು ಆಯತಗಳಿವೆ. ಎಷ್ಟು ಚೌಕ ತುಂಡುಗಳು ಪ್ರತಿ ಆಕೃತಿಯಿಂದ ಹರಿದು ಹೋಗಿವೆ?








ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು 'ನನ್ನ ಆಯತದ ಆಟವನ್ನು ಕಂಡುಹಿಡಿ' ಆಡಬಹುದು. ಚುಕ್ಕೆ ಕಾಗದವನ್ನು ಉಪಯೋಗಿಸಿ. ಚುಕ್ಕೆ ಕಾಗದದ ಮೇಲೆ ಒಂದು ಮಗು ಎರಡು ಅಭಿಮುಖ ಶೃಂಗಗಳನ್ನು ಗುರ್ತಿಸುತ್ತದೆ. ಎರಡನೇ ಮಗು ಆಯತದ ಆಕಾರ / ಆಕಾರಗಳನನು ಪೂರ್ಣಗೊಳಿಸಬೇಕು.

6. ಇವುಗಳಲ್ಲಿ ಪ್ರತಿ ಆಕೃತಿಯು ಈ ಗುಂಪಿಗೆ ಸೇರುವುದಿಲ್ಲ. ಪ್ರತಿ ಆಕೃತಿಯು ಹೇಗೆ ಭಿನ್ನವಾಗಿದೆ? ಚರ್ಚಿಸಿ.



7. ಆಯತವನ್ನು ಪೂರ್ಣಗೊಳಿಸಲು ಎಡಭಾಗದಲ್ಲಿರುವ ಸರಿಯಾದ ಆಕೃತಿಗೆ ✓ ಗುರುತು ಮಾಡಿ, ಬಲಭಾಗದಲ್ಲಿರುವ ಆಕೃತಿಯಲ್ಲಿನ ಖಾಲಿ ಜಾಗಗಳನ್ನು ತುಂಬಿರಿ.





8. ಈ ಆಕೃತಿಯನ್ನು ವಿಭಜಿಸಿ ಮೂರು ತ್ರಿಭುಜಗಳನ್ನಾಗಿ ಮಾಡಲು ಎರಡು ಗೆರೆಗಳನ್ನು ಎಳೆಯಿರಿ.


9. ಈ ಆಕೃತಿಯನ್ನು ವಿಭಜಿಸಿ 3 ತ್ರಿಭುಜಗಳನ್ನಾಗಿ ಮಾಡಲು ಒಂದು ಗೆರೆ ಎಳೆಯಿರಿ.

10. ನಿಮ್ಮ ನೋಟ್ ಪುಸ್ತಕದಲ್ಲಿ ಮುಂದಿನ ಆಕೃತಿಗಳನ್ನು ವಿವಿಧ ಗಾತ್ರ ಮತ್ತು ದಿಕ್ಕೂಚಿಗಳಿರುವಂತೆ (ಕೋನೀಯ ಸ್ಥಾನಗಳು) ಮಾಡಿರಿ.

(a) ತ್ರಿಭುಜ (b) ಆಯತ


(c) ವೃತ್ತ (d) ಇತರೆ ಆಕಾರ

ಬಾಗಿಲುಗಳು–ಚುಕ್ಕೆಗಳು–ರೇಖೆಗಳು




ವಕ್ರ ಮತ್ತು ಸರಳ ರೇಖೆಗಳನ್ನು ಬಳಸಿ ನಿಮ್ಮದೇ ಆದ ಅಂಚು ವಿನ್ಯಾಸಗಳನ್ನು ಮಾಡಲು ಪ್ರಯತ್ನಿಸಿ.

ಮುಂದಿನ ರೇಖಾ ಮಾದರಿಯನ್ನು ಮುಂದುವರೆಸಿ.



ಟ್ಯಾನ್‌ಗ್ರಾಂ

ಪುಸ್ತಕದ ಕೊನೆಯಲ್ಲಿ ನೀಡಿರುವ ಟ್ಯಾನ್‌ಗ್ರಾಂ ತುಣುಕುಗಳನ್ನು ಬಳಸಿ. ಕೆಲವು ತುಣುಕುಗಳನ್ನು ಬಳಸಿ ಈ ಆಕೃತಿಗಳನ್ನು ರೂಪಿಸಬಲ್ಲಿರಾ?



6 ನೂರರ ಮನೆ – 1


Z4F2F8



ಅಜ್ಜಿ, ತೇಜಿ ಮತ್ತು ಜೋಜೋ ಮೇಳಕ್ಕೆ ಬಂದಿರುತ್ತಾರೆ. 'ತ್ರಿಭುಜಾಕಾರದ ತೋರಣಗಳ' ಸಂಖ್ಯೆಯನ್ನು ಊಹಿಸಿ.



ಈಗ ಎಷ್ಟಿವೆ ಎಂಬುದನ್ನು ಕಂಡುಹಿಡಿಯಿರಿ.



ತ್ರಿಭುಜಾಕಾರದ ತೋರಣದ ಒಂದು ಸಾಲಿನಲ್ಲಿ ಎಷ್ಟು ತ್ರಿಭುಜಗಳಿವೆ? ☐




ಎಲ್ಲ ತ್ರಿಭುಜಗಳನ್ನು ಎಣಿಸಲು ಪ್ರಯತ್ನಿಸಿ.

ಒಟ್ಟು ತ್ರಿಭುಜಗಳು: 200 ಕ್ಕಿಂತ 50 ಹೆಚ್ಚಾಗಿವೆ. ಅಂದರೆ 250.



ಶಿಕ್ಷಕರಿಗೆ ಟಿಪ್ಪಣಿ: 200 ಕ್ಕೂ ಹೆಚ್ಚಿನ ಸಂಖ್ಯೆಗಳಲ್ಲಿರುವ ವಸ್ತುಗಳನ್ನು ಎಣಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಹಿಂದೆ ಮಾಡಿದಂತೆ, ಅದೇ ಸಂಖ್ಯಾ ಹೆಸರುಗಳನ್ನು ಉಪಯೋಗಿಸಿಕೊಂಡು, ಹೇಗೆ ಎಣಿಸಬಹುದು ಎಂಬುದನ್ನು ತಿಳಿಸಿ.



ಅಲ್ಲಿ ಎಷ್ಟು ಬಳೆಗಳಿವೆ ಎಂದು ಊಹಿಸಿ. ☐


ಒಟ್ಟು ಬಳೆಗಳ ಸಂಖ್ಯೆಯನ್ನು ಎಣಿಸಲು ಪ್ರಯತ್ನಿಸಿ.

ತೇಜಿ ಹೇಗೆ ಎಣಿಸುತ್ತಿದ್ದಾಳೆ ಗಮನಿಸಿ.

ಒಟ್ಟು ಬಳೆಗಳು: 200 ಕ್ಕಿಂತ 80 ಹೆಚ್ಚು ಅಂದರೆ 280.

ಬಳೆಗಳು! ಎಣಿಸೋಣ,
10, 20, 30, ... 100, 110, 120 ...
200, 210, ...
270, 271, 272 ... 279, 280





ಪೆಟ್ಟಿಗೆಗಳಲ್ಲಿ ಎಷ್ಟು ಚಾಕ್ಲೆಟ್‌ಗಳಿವೆ? ಊಹಿಸಿ. ☐

ಎಣಿಸಿ ಮತ್ತು ಪರಿಶೀಲಿಸಿ. ☐



ಇಲ್ಲಿ ಬಹಳಷ್ಟು ಚಾಕ್ಲೆಟ್‌ಗಳಿವೆ!
ಅವುಗಳನ್ನು ಎಣಿಸೋಣ
10, 20, 30,...
100, 110, 120, ...190, 200,
210, ...290, 291, 292,
293, ..., 298

ಜೋಜೋ ಕೈಯಲ್ಲಿ 2 ಚಾಕ್ಲೆಟ್‌ಗಳಿವೆ.

ಅಲ್ಲಿ ಒಟ್ಟು ಎಷ್ಟು ಚಾಕ್ಲೆಟ್‌ಗಳಿವೆ? ☐

298 + 1 = 299

299 + 1 = 300

300 ಆಗಲು ಇನ್ನೂ ಎಷ್ಟು ತ್ರಿಭುಜಗಳು ಬೇಕಾಗಿವೆ? ☐

300 ಕ್ಕಿಂತ ಎಷ್ಟು ಬಳೆಗಳು ಕಡಿಮೆ ಇವೆ? ☐

ಯಾವುದು ಹೆಚ್ಚು: ಬಳೆಗಳು ಅಥವಾ ತ್ರಿಭುಜಗಳು?

298 ಮತ್ತು ಇನ್ನೊಂದು 299; 299 ಮತ್ತು ಇನ್ನೊಂದು 300.





ನಾವು ಮಾಡೋಣ

1. ಜೋಜೋ ಮೇಳದಲ್ಲಿ ನೆಲಹಾಸುಗಳ ಹಾದಿಯಲ್ಲಿ ಜಿಗಿಯುತ್ತಿದ್ದಾನೆ. ಖಾಲಿ ನೆಲಹಾಸುಗಳನ್ನು (ಟೈಲ್‌ಗಳನ್ನು) ಸಂಖ್ಯೆಗಳಿಂದ ಭರ್ತಿ ಮಾಡಿ.



211 212 216

2. ಖಾಲಿ ಜಾಗಗಳನ್ನು ಸರಿಯಾದ ಸಂಖ್ಯೆಗಳಿಂದ ತುಂಬಿ.

294 295

302 310

3. 

227 230 234



4.  382 ← ← ← ← 387 ← ← 390 

5. ಮೈದಾನದ ಮೇಲೆ ಇರುವೆಗಳಿಗೆ ಆಹಾರ ಸಿಕ್ಕಿದೆ. ಅಲ್ಲಿ ಎಷ್ಟು ಇರುವೆಗಳಿವೆ ಊಹಿಸಿ. ಎಣಿಸಿ ಮತ್ತು ಪರಿಶೀಲಿಸಿ.







ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು ಏಕೆ ಬೇರೆ ಬೇರೆ ಉತ್ತರಗಳನ್ನು ಪಡೆದರು ಮತ್ತು ಎಣಿಸುವುದನ್ನು ಹೇಗೆ ಉತ್ತಮಪಡಿಸುವುದು ಎಂಬುದರ ಬಗ್ಗೆ ಕೇಳಿ. ಉತ್ತರಗಳಲ್ಲಿನ ವ್ಯತ್ಯಾಸಗಳನ್ನು, 10 ರ ಗುಂಪಿನಲ್ಲಿರುವ ವಸ್ತುಗಳನ್ನು ಹೇಗೆ ಪರಿಣಾಮಕಾರಿಯಾಗಿ ದೊಡ್ಡ ಸಂಖ್ಯೆಗಳನ್ನೂ ಎಣಿಸಲು ಉಪಯೋಗಿಸಬಹುದು ಎಂಬುದಕ್ಕೆ ಒಂದು ಅವಕಾಶವಾಗಿ ಮಾಡಿಕೊಳ್ಳಿ. ಸಂಖ್ಯೆಗಳನ್ನು ಎಣಿಸುವ ಒಂದು ಸರಿಯಾದ ತಂತ್ರವನ್ನು ಗಳಿಸಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಿ.




ಬೆಂಕಿಕಡ್ಡಿ ಕಟ್ಟುಗಳ ಸಹಾಯದಿಂದ ತೇಜಿ ಮತ್ತು ಜೋಜೋ ಸಂಖ್ಯೆಗಳನ್ನು ಬರೆಯಲು ಕಲಿತಿದ್ದಾರೆ. ಅವರು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಸಂಖ್ಯಾ ವಾಕ್ಯಗಳನ್ನೂ ಬರೆಯಬಲ್ಲರು.




6. ಖಾಲಿ ಜಾಗಗಳನ್ನು ಸೂಕ್ತವಾಗಿ ಭರ್ತಿ ಮಾಡಿ.

ಬೆಂಕಿಕಡ್ಡಿಗಳು	ಸಂಖ್ಯೆ	ಸಂಖ್ಯಾವಾಕ್ಯ
	235	200 ಮತ್ತು 35 ಹೆಚ್ಚು (200 + 35) 250 ಕ್ಕಿಂತ 15 ಕಡಿಮೆ (250 – 15)
		

		
		300 ಮತ್ತು 16 ಹೆಚ್ಚು
	109	

7. ಮೇಲೆ ನೀಡಿರುವ ಸಂಖ್ಯೆಗಳನ್ನು ಸಂಖ್ಯಾ ರೇಖೆಯ ಮೇಲೆ ಇರಿಸಿ.






200 ಮತ್ತು 250ರ ನಡುವೆ 235 ಇದೆ.




ಶಿಕ್ಷಕರಿಗೆ ಟಿಪ್ಪಣಿ: ಬೆಂಕಿ ಕಡ್ಡಿಗಳನ್ನು ಅಥವಾ ಮನೆಯಲ್ಲಿ ಲಭ್ಯವಿರುವ ಯಾವುದೇ ವಸ್ತುವನ್ನು ಉಪಯೋಗಿಸಿಕೊಂಡು, ದೊಡ್ಡ ಸಂಖ್ಯೆಗಳನ್ನು ಮಾಡಲು ಮಕ್ಕಳಿಗೆ ತಿಳಿಸಿ, ಅದನ್ನು ಶಾಲೆಗೆ ತರಲು ಹೇಳಿ.

8. ಚಿತ್ರಗಳನ್ನು ನೋಡಿ ಮತ್ತು ಅವು ಸೂಚಿಸುವ ಸಂಖ್ಯೆಗಳನ್ನು ಬರೆಯಿರಿ.



9. ಚಿತ್ರದಲ್ಲಿ ತೋರಿಸಿರುವಂತೆ ಸಂಖ್ಯೆಗಳ ಜಾರು ಪಟ್ಟಿ ಮಾಡಿ. ಮುಂದೆ ನೀಡಿರುವಂತೆ ಸಂಖ್ಯೆಯನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ.



a. 285 – ಸಂಖ್ಯೆಗೆ ಒಂದು ಹೆಚ್ಚಿಸಿ ☐

b. 147 – ಸಂಖ್ಯೆಗೆ ಹತ್ತು ಹೆಚ್ಚಿಸಿ. ☐

c. 367 – ಸಂಖ್ಯೆಗೆ 2 ಕಡಿಮೆ ಮಾಡಿ. ☐

d. 239 – ಸಂಖ್ಯೆಗೆ 10 ಕಡಿಮೆ ಮಾಡಿ. ☐

e. 290 – ಸಂಖ್ಯೆಗೆ 20 ಹೆಚ್ಚಿಸಿ ☐




ಶಿಕ್ಷಕರಿಗೆ ಟಿಪ್ಪಣಿ: ಶಿಕ್ಷಕರು ಕಲಿಕೋಪಕರಣವನ್ನು ತಯಾರಿಸಿ ಮಕ್ಕಳೊಂದಿಗೆ ಆಡಬೇಕು.



ನಾವು ಆಡೋಣ

ಬಾವುಟದ ಆಟ: ಊಹಿಸುವ ಆಟವೊಂದನ್ನು ಆಡೋಣ. ತೇಜಿ 200 ಮತ್ತು 210 ರ ನಡುವಿನ ಒಂದು ಸಂಖ್ಯೆಯನ್ನು ಯೋಚಿಸಿದ್ದಾಳೆ. ಜೋಜೋ ಅದನ್ನು ಊಹಿಸಬೇಕಾಗಿದೆ.




ಈಗ ನೀವು ಪ್ರಯತ್ನಿಸಿ ಮತ್ತು ನಿಮ್ಮ ಸ್ನೇಹಿತರೊಂದಿಗೆ ಆಟವಾಡುತ್ತಾ ಸಂಖ್ಯೆಯನ್ನು ಊಹಿಸಿ.



ಶಿಕ್ಷಕರಿಗೆ ಟಿಪ್ಪಣಿ: ಕಪ್ಪುಹಲಗೆಯ ಮೇಲೆ ಈ ಆಟವನ್ನು ಮಕ್ಕಳೊಂದಿಗೆ ಆಡಿ; ನಂತರ, ಮಕ್ಕಳು ತಮ್ಮ ನೋಟ್‌ಪುಸ್ತಕಗಳಲ್ಲಿ ಇದೇ ಆಟವನ್ನು ಜೋಡಿಗಳಲ್ಲಿ ಅಥವಾ ಸಣ್ಣ ಗುಂಪುಗಳಲ್ಲಿ ಆಡಬಹುದು. ಶಿಕ್ಷಕರು ಈ ಆಟವನ್ನು ಸಂಖ್ಯೆಗಳ ವ್ಯಾಪ್ತಿಯನ್ನು ಹೆಚ್ಚಿಸುವುದರಿಂದ ಮತ್ತು ಊಹೆಗಳ ಸಂಖ್ಯೆಯನ್ನು ನಿರ್ಬಂಧಿಸುವುದರಿಂದ, ಇನ್ನೂ ಹೆಚ್ಚು ಉತ್ಸುಕವಾಗುವಂತೆ ಮಾಡಬಹುದು.

ಎಣಿಕೆಯ ಜಾದು

ಯಾವುದೇ ಸಂಖ್ಯೆಯನ್ನು ಆಂಗ್ಲ ಅಕ್ಷರಗಳಲ್ಲಿ ಬರೆಯಿರಿ. ಅದರಲ್ಲಿ ಅಕ್ಷರಗಳ ಸಂಖ್ಯೆಯನ್ನು ಎಣಿಸಿ ಮತ್ತು ಆ ಹೊಸ ಸಂಖ್ಯೆಯ ಹೆಸರನ್ನು ಅದರ ಕೆಳಗೆ ಬರೆಯಿರಿ. ಇದನ್ನು ಹೀಗೇ ಮುಂದುವರೆಸಿ – ಏನಾಗುತ್ತದೆ?



187 One hundred and eighty seven



204 Two hundred and four

ರೇಖೆಯಲ್ಲಿನ ಸಂಖ್ಯೆಗಳು

ತೇಜಿ, ಜೋಜೋ ಮತ್ತು ಭೋಲು ಅವರುಗಳಿಗೆ ಮುಂದಿನ ನೂರರ ಸಂಖ್ಯೆ ಯಾವುದು ಎಂದು ಹೇಳಿ. ಮುಂದಿನ ಸಂಖ್ಯಾರೇಖೆಯಲ್ಲಿ ಅದನ್ನು ಬರೆಯಿರಿ. ನೀವು ಬೆಂಕಿಕಡ್ಡಿಗಳನ್ನು ಬಳಸಿ ಸಂಖ್ಯೆಯನ್ನು ತೋರಿಸಬಲ್ಲಿರಾ?



ಒಂದು ನೂರು,
..... ಎರಡು ನೂರು,
..... ಮೂರು ನೂರು,
ಮತ್ತು ???
ನಾಲ್ಕು ನೂರು

ನಾವು ಮಾಡೋಣ

ತೇಜಿ ಮತ್ತು ಜೋಜೋ ತಮ್ಮ ಸಂಖ್ಯೆಗಳನ್ನು ಮುಂದಿನ ಸಂಖ್ಯಾರೇಖೆಯ ಮೇಲೆ ಇರಿಸಲು ಯತ್ನಿಸುತ್ತಿದ್ದಾರೆ.


1. 216, 243, 257 – ಇವುಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.



2. 329, 332, 337, 375 ಮತ್ತು 387 ಇವುಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.



3. 400 ರಿಂದ 387 ಎಷ್ಟು ದೂರವಿದೆ ಹೇಳಿ:.....



4. ಯಾವುದು ಹೆಚ್ಚು? 393 ಅಥವಾ 400. ಸಂಖ್ಯಾರೇಖೆಯನ್ನು ಬಳಸಿ ತೋರಿಸಿ. ಮುಂದಿನ ಸಂಖ್ಯಾರೇಖೆಯಲ್ಲಿ ಸಂಖ್ಯೆಗಳನ್ನು ಭರ್ತಿ ಮಾಡಿ ಮತ್ತು 400 ರಿಂದ 393 ಎಷ್ಟು ದೂರದಲ್ಲಿವೆ ಎಂಬುದನ್ನು ಜಿಗಿತದ ಮೂಲಕ ತೋರಿಸಿ.





ಶಿಕ್ಷಕರಿಗೆ ಟಿಪ್ಪಣಿ: ಮೇಲಿನ ಸಂಖ್ಯಾರೇಖೆಗಳಲ್ಲಿ, ವಿವಿಧ ಜಿಗಿತಗಳಿಗೆ ಗಮನಹರಿಸಲು ಮಕ್ಕಳಿಗೆ ಬೆಂಬಲ ನೀಡಿ. ಬೆಂಕಿಕಡ್ಡಿಗಳ ಬಂಡಲ್ ಅಥವಾ ಯಾವುದೇ ಸೂಕ್ತವಾದ ವಸ್ತುಗಳನ್ನು ಉಪಯೋಗಿಸಿ, ಸಂಖ್ಯೆಗಳನ್ನು ಪ್ರತಿನಿಧಿಸುವ ಪರಿಮಾಣಗಳನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಶಿಕ್ಷಕರು ಸಹಾಯ ಮಾಡಬೇಕು.

5. ತೇಜಿ ಮತ್ತು ಜೋಜೋ ಎಲ್ಲೆಡೆ ಸುತ್ತಾಡಿ ಹಸಿದಿದ್ದಾರೆ. ಅವರು ಫಾರೂಕ್ ಚಾಚಾ ಅವರ ಸ್ವೀಟ್ ಅಂಗಡಿಗೆ ಹೋಗುತ್ತಾರೆ.



a. ಒಂದು ಟ್ರೇನಲ್ಲಿ ಎಷ್ಟು ಮೈಸೂರು ಪಾಕ್ ತುಂಡುಗಳಿವೆ? _____

b. ಮೈಸೂರು ಪಾಕ್‌ನ ಒಟ್ಟು ಎಷ್ಟು ತುಂಡುಗಳಿವೆ? _____


c. ಚಾಚಾ ಅವರ ಟ್ರೇಗಳಲ್ಲಿ ಎಷ್ಟು ಲಡ್ಡುಗಳಿವೆ? _____

d. ಚಾಚಾ ಅವರಲ್ಲಿ ಎಷ್ಟು ಧೋಕ್ಲಾಗಳಿವೆ? _____

e. ಇನ್ನಷ್ಟು ಲಡ್ಡುಗಳನ್ನು ಚಾಚಾ ಟ್ರೇಯಲ್ಲಿ ತುಂಬಿಸಲಿದ್ದಾರೆ. ಟ್ರೇ ತುಂಬಲು ಇನ್ನೂ ಎಷ್ಟು ಲಡ್ಡುಗಳು ಬೇಕು? _____

f. ಕೊನೆಯ ಟ್ರೇ ತುಂಬಿಸಿದ ನಂತರ ಅವರ ಬಳಿ ಒಟ್ಟು ಎಷ್ಟು ಲಡ್ಡುಗಳಿರುತ್ತವೆ?

g. ಮುಂದಿನ ಸಂಖ್ಯೆಗಳನ್ನು ಸಂಖ್ಯಾರೇಖೆಯಲ್ಲಿ ಗುರುತಿಸಿ. 423, 487, 438, 476.



ಐದು ನೂರನ್ನು (500) ಸಂಖ್ಯಾ ರೇಖೆಯ ಮೇಲೆ ಗುರುತಿಸಿ.



ನಾವು ಮಾಡೋಣ

1. ತೇಜಿ ಮತ್ತು ಜೊಜೊ ದೊಡ್ಡ ಅಪಾರ್ಟ್‌ಮೆಂಟ್ ಒಂದನ್ನು ನೋಡಿದರು.

ಕಂಬಸಾಲು

ಅಡ್ಡಸಾಲು

HOP HUNDREDS HOME

					186				
			174						
				155					160
		143							
							138		
						127			
111	112	113							
101	102	103	104	105	106	107	108	109	110
									100
11	12	13	14	15	16	17	18	19	20
01	02	03	04	05	06	07	08	09	10

ಎಣಿಸದೆಯೇ, ಛಾಯೀಕರಿಸಿರುವ ಮನೆಗಳ ಸಂಖ್ಯೆಗಳನ್ನು ಕಂಡುಹಿಡಿಯಿರಿ. ನಿಮ್ಮ ಮಾರ್ಗೋಪಾಯಗಳನ್ನು ಹಂಚಿಕೊಳ್ಳಿ.

105 ರ ಮೇಲಿನ ಒಂದು ಮಹಡಿ 115.

113, 13ರ ನಂತರ 10ನೇ ಮಹಡಿಯಲ್ಲಿದೆ.





ಛಾಯೀಕರಿಸಿದ ಬಾಕ್ಸ್‌ಗಳನ್ನು ಸರಿಯಾದ ಮನೆ ಸಂಖ್ಯೆಗಳಿಂದ ತುಂಬಿ.







ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು ಮೊದಲು ಖಾಲಿ ಬಾಕ್ಸ್‌ಗಳನ್ನು ಎಣಿಸುವುದರಿಂದ ತುಂಬಲಿ, ಆದರೆ ಉಳಿದವುಗಳನ್ನು ತುಂಬುವಾಗ ವಿನ್ಯಾಸಗಳನ್ನು ಗಮನಿಸಲು ಪ್ರೋತ್ಸಾಹಿಸಿ.

2. ಫಾರೂಕ್ ಚಾಚಾನ ಅಂಗಡಿಯಿಂದ ಅರವಿಂದ್ ದಾದಾ ಬೇರೆ ಬೇರೆ ಮನೆಗಳಿಗೆ ಸಿಹಿಯನ್ನು ವಿತರಿಸಬೇಕಿದೆ. ಅವರು ಸಿಹಿಯನ್ನು ವಿತರಿಸಬೇಕಿರುವ ಮನೆಗಳಿಗೆ ಬಣ್ಣ ಹಚ್ಚಿ.

ಮನೆ ಸಂಖ್ಯೆಗಳು ಈ ರೀತಿ ಇವೆ:


209, 228, 242, 258, 267, 276, 290, 315, 346, 367, 389, 395.




3. ಮುಂದಿನ ಮನೆಗಳಿಗೆ ಮಹಡಿ ಮತ್ತು ಕಂಬಸಾಲಿನ ಸಂಖ್ಯೆಗಳನ್ನು ಬರೆಯಿರಿ.

ಮನೆ ಸಂಖ್ಯೆ	ಮಹಡಿ	ಕಂಬಸಾಲು
13	1st	3
67		
106		
159		
192		
231		
245		
328		
380		
399		

4. ಕಟ್ಟಡದಿಂದ ಮನೆಗಳ ಸಂಖ್ಯೆಯನ್ನು ಕಂಡುಹಿಡಿದು ಖಾಲಿ ಜಾಗಗಳಲ್ಲಿ ಸರಿಯಾದ ಮನೆಯ ಸಂಖ್ಯೆಗಳನ್ನು ಬರೆಯಿರಿ. ನೀವೇನು ಗುರುತಿಸಿದಿರಿ? ಮೇಲೆ ಮತ್ತು ಕೆಳಗೆ ಹಾಗೂ ಎಡದಿಂದ ಬಲಕ್ಕೆ ಚಲಿಸಿದಂತೆ ಮನೆ ಸಂಖ್ಯೆಗಳು ಹೇಗೆ ಬದಲಾಗುತ್ತವೆ ಚರ್ಚಿಸಿ.





5. ನಾನು ಯಾರು?

ನನ್ನಲ್ಲಿ 9, 1 ಮತ್ತು 5 ಅಂಕಿಗಳಿವೆ.
ನಾನು 200ಕ್ಕಿಂತ ಕಡಿಮೆ.
ನನ್ನಲ್ಲಿ 9 ಬಿಡಿಗಳಿವೆ.
ನಾನು ಯಾವ ಸಂಖ್ಯೆ?
.....

ನಾನು 3 ಅಂಕಿಯ ಸಂಖ್ಯೆ. ನನ್ನಲ್ಲಿ ಕೇವಲ 4 ಮತ್ತು 0 ಎರಡೇ ಅಂಕಿಗಳಿವೆ.
ನಾನು ಯಾವ ಸಂಖ್ಯೆ?
.....

ನಾನು 300ಕ್ಕಿಂತ ಹೆಚ್ಚು ಆದರೆ 400ಕ್ಕಿಂತ ಕಡಿಮೆ.
ನನ್ನಲ್ಲಿ ಹತ್ತುಗಳಿಲ್ಲ.
ನನ್ನ ಬಿಡಿ ಮತ್ತು ನೂರರ ಅಂಕಿಗಳು ಒಂದೇ ಆಗಿವೆ.
ನಾನು ಯಾವ ಸಂಖ್ಯೆ?
.....

ಅರವಿಂದ್ ದಾದಾ ಬಾಕ್ಸ್‌ಗಳಲ್ಲಿ 100 (H), ರಂತೆ 10(T) ರಂತೆ ಮತ್ತು ಪೊಟ್ಟಣಗಳಲ್ಲಿ ಬಿಡಿ ಸಂಖ್ಯೆ (0) ಇರುವಂತೆ ಸಿಹಿತಿಂಡಿಯನ್ನು ತುಂಬಿಸುತ್ತಾರೆ. ಪ್ರತಿ ಮನೆಗೆ ನೀಡಬೇಕಾಗಿರುವ ಸಿಹಿತಿಂಡಿಗಳು ಮನೆ ಸಂಖ್ಯೆಯೇ ಆಗಿವೆ.

6. ಮುಂದಿನ ಪ್ರತಿ ಮನೆ ಸಂಖ್ಯೆಗೆ ಸಿಹಿತಿಂಡಿಗಳನ್ನು ಬರೆಯಿರಿ.


ಮನೆ ಸಂಖ್ಯೆಗಳು	ನೀಡುವ ಸಿಹಿ ತಿಂಡಿಗಳ ಪೆಟ್ಟಿಗೆಗಳು	ಪೆಟ್ಟಿಗೆ ಮತ್ತು ಪೊಟ್ಟಣಗಳ ವಿಧಗಳು	ಸಂಖ್ಯಾವಾಕ್ಯ
211	ನೂ □ □ ಹ □ ಬಿ □	2 ನೂ + 1 ಹ + 1 ಬಿ	200 + 10 +1
309			
275			
423			
365			

343			
458			
562			
606			
800			



ಶಿಕ್ಷಕರಿಗೆ ಟಿಪ್ಪಣಿ: ಡೀನ್ ಬ್ಲಾಕ್‌ಗಳನ್ನು ಉಪಯೋಗಿಸಿಕೊಂಡು ಸ್ವೀಟ್‌ಗಳನ್ನು ತೋರಿಸುವುದನ್ನು ಮಕ್ಕಳು ಮಾಡಬೇಕು. ಪುಸ್ತಕದ ಕೊನೆಯಲ್ಲಿ ಒಂದು ಸೆಟ್ ನೀಡಿದೆ. ಇವುಗಳನ್ನು ಚೌಕಾಕಾರದ ಗಣಿತ ನೋಟ್‌ಪುಸ್ತಕಗಳನ್ನು ಉಪಯೋಗಿಸಿಕೊಂಡು ಸುಲಭವಾಗಿ ಮಾಡಬಹುದು. ರಚಿಸುವ ಮೊದಲು, ಡೀನ್ ಬ್ಲಾಕ್‌ಗಳನ್ನು ಉಪಯೋಗಿಸಿಕೊಂಡು ಒಂದು ಮಾದರಿಯನ್ನು ಮಕ್ಕಳು ಮಾಡಬಹುದು.

7.



a. ಹಳದಿ ಮತ್ತು ಗುಲಾಬಿ ಬಣ್ಣದ ಮನೆಗಳ ಸಂಖ್ಯೆಗಳನ್ನು ಬರೆಯಿರಿ.

b. ಈ ಸಂಖ್ಯೆಗಳಲ್ಲಿ ನೀವು ಕಾಣುವ ವಿನ್ಯಾಸವನ್ನು ಬರೆಯಿರಿ.

.....

.....

8. ಅರವಿಂದ್ ದಾದಾ ಅವರು 100 ರ ದೊಡ್ಡ ಪೆಟ್ಟಿಗೆಯಲ್ಲಿ 10 ರ ಸಣ್ಣ ಪೆಟ್ಟಿಗೆಗಳನ್ನು ಪ್ಯಾಕ್ ಮಾಡಲು ಬಯಸುತ್ತಾರೆ.

a. ಅವರು 100 ರ ಪೆಟ್ಟಿಗೆಯಲ್ಲಿ 10 ರ ಎಷ್ಟು ಪೆಟ್ಟಿಗೆಗಳನ್ನು ಹೊಂದಿಸಬಹುದು?

b. ಅವರು ಎರಡು 100 ರ ಪೆಟ್ಟಿಗೆಗಳಲ್ಲಿ 10 ರ ಎಷ್ಟು ಪೆಟ್ಟಿಗೆಗಳನ್ನು ಹೊಂದಿಸಬಹುದು?

c. ಅವರು ನಾಲ್ಕು 100 ರ ಪೆಟ್ಟಿಗೆಗಳಲ್ಲಿ 10 ರ ಎಷ್ಟು ಪೆಟ್ಟಿಗೆಗಳನ್ನು ಹೊಂದಿಸಬಹುದು?

d. ಅವರು 100 ರ ಪೆಟ್ಟಿಗೆಯನ್ನು ತೆರೆದರೆ ಅವರಿಗೆ 10 ರ ಎಷ್ಟು ಪೆಟ್ಟಿಗೆಗಳು ಕಾಣುತ್ತವೆ?



ಶಿಕ್ಷಕರಿಗೆ ಟಿಪ್ಪಣಿ: ಸಂಖ್ಯೆಗಳು, ಕೆಲವು ಅಂಕಿಗಳು ಇವುಗಳಲ್ಲಿನ ವಿನ್ಯಾಸಗಳನ್ನು ಗುರ್ತಿಸಲು, ಅಂಕಿಗಳು ಹೇಗೆ ಬದಲಾಗುತ್ತವೆ ಎಂಬುದನ್ನು ಗಮನಿಸಲು ಮಕ್ಕಳನ್ನು ಶಿಕ್ಷಕರು ಪ್ರೋತ್ಸಾಹಿಸಬೇಕು. 100 ರ ಬಾಕ್ಸ್, 10 ರ ಬಾಕ್ಸ್ ಮತ್ತು 1 ರ ಬಾಕ್ಸ್‌ಗಳಲ್ಲಿನ ಸಂಬಂಧಗಳನ್ನು ಕಂಡುಹಿಡಿಯಲು ಸಹಾಯ ಮಾಡಬೇಕು.

9. ಸಂಖ್ಯಾ ಬೇಟೆ

200 ಮತ್ತು 300 ರ ನಡುವಿನ ಸಂಖ್ಯೆಗಳನ್ನು ಬರೆಯಿರಿ. ಅವುಗಳಲ್ಲಿ 5 ಒಂದು ಅಂಕಿ ಆಗಿರಬೇಕು. 245 ಅಂತಹ ಒಂದು ಸಂಖ್ಯೆಯೇ? ಇತರೆ ಸಂಖ್ಯೆಗಳನ್ನು ಬರೆಯಿರಿ.


.....

.....



ನಾವು ಆಡೋಣ

ನಿಮಗೆ ಈ ಆಟ ನೆನಪಿದೆಯೇ? ನಾವು ಇದನ್ನು ಪುನಃ ಆಡೋಣ. ಮುಂದಿನ ಕೋಷ್ಟಕದಲ್ಲಿ ನಾವು ಕ್ರಿಯೆಗಳನ್ನು ದಾಖಲಿಸೋಣ. ಒಂದನ್ನು ನಿಮಗಾಗಿ ಮಾಡಲಾಗಿದೆ.




ನೂರುಗಳು	ಹತ್ತುಗಳು	ಬಿಡಿಗಳು	ಸಂಖ್ಯೆ
ಚಪ್ಪಾಳೆ ಚಪ್ಪಾಳೆ	ಚಿಟಿಕೆ	ತಟ್ಟು	211

ತೋರಿಸಿ ಮತ್ತು ಹೇಳಿ

ಮುಂದಿನ ಪ್ರತಿ ಕಾರ್ಡ್, ಹಿಂದಿನ ಕಾರ್ಡ್‌ನ ಪ್ರಶ್ನೆಗೆ ಉತ್ತರಿಸುವಂತೆ ಕಾರ್ಡ್‌ಗಳ ಸರಪಣಿಯನ್ನು ರಚಿಸಿ. ಈ ಕಾರ್ಡ್‌ಗಳನ್ನು ತರಗತಿಯ ಮಕ್ಕಳಿಗೆ ಹಂಚಿ. ಪ್ರತಿ ಮಗು ತನ್ನ ಕಾರ್ಡ್‌ನ್ನು ಗಟ್ಟಿಯಾಗಿ ಓದುತ್ತದೆ ಮತ್ತು ಉತ್ತರವಿರುವ ಕಾರ್ಡ್ ಹೊಂದಿರುವ ಮತ್ತೊಂದು ಮಗು ತನ್ನಷ್ಟಕ್ಕೆ ಉತ್ತರವನ್ನು ಗುರುತಿಸಬೇಕು. ಪ್ರತಿ ಮಗು ಒಂದು ಪ್ರಶ್ನೆಗೆ ತನ್ನಲ್ಲಿನ ಕಾರ್ಡ್‌ಗಳನ್ನು ಬಳಸಿ ಉತ್ತರಿಸಿದರೆ ಆಟವು ಮುಗಿಯುತ್ತದೆ.

ಒಂದು ಉದಾಹರಣೆಯನ್ನು ಮುಂದೆ ನೀಡಿದೆ.



ಯಾರಲ್ಲಿ ಹೆಚ್ಚು ಲಡ್ಡುಗಳಿವೆ ಎಂಬುದನ್ನು ಹೋಲಿಸೋಣ ಮತ್ತು ಅದನ್ನು ದೊಡ್ಡದು (>) ಅಥವಾ ಚಿಕ್ಕದು (<) ಚಿಹ್ನೆಯನ್ನು ಬಳಸಿ ಸೂಕ್ತವಾಗಿ ತೋರಿಸೋಣ.

487 ಲಡ್ಡುಗಳು 423 ಲಡ್ಡುಗಳಿಗಿಂತ ಹೆಚ್ಚು




487 > 423
ದೊಡ್ಡ ಸಂಖ್ಯೆಯ ಕಡೆಗೆ ತೆರೆದ ಬಾಯಿಯಂತಿರುವ ಚಿಹ್ನೆ ಇರಲಿ

423 ಲಡ್ಡುಗಳು 487 ಲಡ್ಡುಗಳಿಗಿಂತ ಕಡಿಮೆ

423 < 487




ಈಗ 321 ಮತ್ತು 231 ನ್ನು ಹೋಲಿಸಿ. 3 ನೂರುಗಳು 2 ನೂರಕ್ಕಿಂತ ಹೆಚ್ಚು. ಸಂಖ್ಯೆಗಳಲ್ಲಿನ ಇತರೆ ಅಂಕಿಗಳು ಇಲ್ಲಿ ಮುಖ್ಯವೆ? ಇಲ್ಲ. ಆದ್ದರಿಂದ 321 ಇದು 231ಕ್ಕಿಂತ ದೊಡ್ಡದು (>).



321 > 231

ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ. ನಾವು 209ನ್ನು 290 ರೊಂದಿಗೆ ಹೋಲಿಸುತ್ತಿದ್ದೇವೆ. ಎರಡೂ ಸಂಖ್ಯೆಗಳಲ್ಲಿ ಎರಡು ನೂರುಗಳಿವೆ. ಆದರೆ 9 ಬಿಡಿಗಳು 9 ಹತ್ತುಗಳಿಗಿಂತ ಕಡಿಮೆ. ಹಾಗಾಗಿ, 209 ಇದು 290ಕ್ಕಿಂತ ಕಡಿಮೆ (<).



209 < 290



ನಾವು ಮಾಡೋಣ

1. ಮುಂದಿನ ಸಂಖ್ಯೆಗಳನ್ನು ಸೂಕ್ತ ಚಿಹ್ನೆ >, < ಗಳನ್ನು ಬಳಸಿ ಹೋಲಿಸಿ.

(a)



199, ಇದು 201 ಕ್ಕಿಂತ .....

(b)



285, ಇದು 275 ಕ್ಕಿಂತ .....

2. ಯೋಚಿಸಿ ಮತ್ತು ಮುಂದಿನವುಗಳನ್ನು ಹೊಂದಿಸಿ.

(a) 325 ಇದು 235 ಕ್ಕಿಂತ ದೊಡ್ಡದು, ಏಕೆಂದರೆ

(b) 235 ಇದು 523 ಕ್ಕಿಂತ ಚಿಕ್ಕದು, ಏಕೆಂದರೆ

(c) 157 ಇದು 153 ಕ್ಕಿಂತ ದೊಡ್ಡದು, ಏಕೆಂದರೆ

(d) 432 ಇದು 423 ಕ್ಕಿಂತ ದೊಡ್ಡದು, ಏಕೆಂದರೆ

(e) 329 ಇದು 392 ಕ್ಕಿಂತ ಚಿಕ್ಕದು, ಏಕೆಂದರೆ

(f) 110 ಇದು 11 ಕ್ಕಿಂತ ಚಿಕ್ಕದು, ಏಕೆಂದರೆ

329 ಮತ್ತು 392 ಎರಡರಲ್ಲೂ ಮೂರು ನೂರುಗಳಿವೆ. 329 ರಲ್ಲಿ 2 ಹತ್ತುಗಳು, 392 ರಲ್ಲಿ 9 ಹತ್ತುಗಳು ಇವೆ.

110 ರಲ್ಲಿ 1 ನೂರು ಮತ್ತು 11 ರಲ್ಲಿ ಯಾವುದೇ ನೂರು ಇಲ್ಲ. (ಸೊನ್ನೆ ನೂರುಗಳು)

235 ರಲ್ಲಿ 2 ನೂರುಗಳು ಮತ್ತು 523 ರಲ್ಲಿ 5 ನೂರುಗಳು ಇವೆ.

325 ರಲ್ಲಿ 3 ನೂರುಗಳು ಮತ್ತು 235 ರಲ್ಲಿ 2 ನೂರುಗಳು ಇವೆ.

157 ಮತ್ತು 153 ಎರಡರಲ್ಲೂ ಒಂದು ನೂರು ಮತ್ತು 5 ಹತ್ತುಗಳಿವೆ. 157ರಲ್ಲಿ 7 ಬಿಡಿಗಳು, 153 ರಲ್ಲಿ 3 ಬಿಡಿಗಳಿವೆ.

432 ಮತ್ತು 423 ಎರಡರಲ್ಲೂ 4 ನೂರುಗಳಿವೆ. 432 ರಲ್ಲಿ 3 ಹತ್ತುಗಳಿವೆ. 423 ರಲ್ಲಿ 2 ಹತ್ತುಗಳಿವೆ.

3. ಪ್ರತಿ ಅಡ್ಡಸಾಲಿನಲ್ಲಿನ ಚಿಕ್ಕ ಸಂಖ್ಯೆಗೆ ವೃತ್ತ ಹಾಕಿ:

(a) 374, 473, 347, 437

(b) 239, 123, 321, 456

4. ಪ್ರತಿ ಅಡ್ಡಸಾಲಿನಲ್ಲಿನ ದೊಡ್ಡಸಂಖ್ಯೆಗೆ ವೃತ್ತ ಹಾಕಿ:

(a) 466, 437, 439, 447, 483

(b) 464, 387, 123, 256, 348

5. ಯಾವುದೇ ಅಂಕಿ ಪುನರಾವರ್ತನೆಯಾಗದಂತೆ 3, 2 ಮತ್ತು 4, ಈ ಅಂಕಿಗಳನ್ನು ಉಪಯೋಗಿಸಿ 3 ಅಂಕಿಯ ಸಂಖ್ಯೆಗಳನ್ನು ರಚಿಸಿ ಹಾಗೂ ಅತೀ ದೊಡ್ಡ ಸಂಖ್ಯೆಗೆ ಕೆಂಪು ಬಣ್ಣ ಹಾಗೂ ಅತೀ ಚಿಕ್ಕ ಸಂಖ್ಯೆಗೆ ಹಳದಿ ಬಣ್ಣವನ್ನು ಹಚ್ಚಿ.

6. ಈಗ 3, 2 ಮತ್ತು 4, ಈ ಅಂಕಿಗಳನ್ನು ಉಪಯೋಗಿಸಿ ಇನ್ನೂ ಕೆಲವು 3 ಅಂಕಿಯ ಸಂಖ್ಯೆಗಳನ್ನು ಮಾಡಿ. ಬೇಕಿದ್ದಲ್ಲಿ ಅಂಕಿಗಳನ್ನು ಪುನರಾವರ್ತಿಸಬಹುದು ಹಾಗೂ ಅತೀ ದೊಡ್ಡ ಸಂಖ್ಯೆಗೆ ಕೆಂಪು ಬಣ್ಣ ಹಾಗೂ ಅತೀ ಸಣ್ಣ ಸಂಖ್ಯೆಗೆ ಹಳದಿ ಬಣ್ಣವನ್ನು ಹಚ್ಚಿ.

7. (a) ಮುಂದಿನ ಸಂಖ್ಯೆಗಳನ್ನು ಚಿಕ್ಕಸಂಖ್ಯೆಯಿಂದ ದೊಡ್ಡ ಸಂಖ್ಯೆಗೆ ಜೋಡಿಸಿ.

456, 389, 207, 99, 110

.....

(b) ಮುಂದಿನ ಸಂಖ್ಯೆಗಳನ್ನು ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಗೆ ಜೋಡಿಸಿ.

67, 376, 294, 249, 494

.....



ಶಿಕ್ಷಕರಿಗೆ ಟಿಪ್ಪಣಿ: ಎರಡು ಸಂಖ್ಯೆಗಳನ್ನು ಹೋಲಿಸುವಾಗ, ಸಂಖ್ಯೆಗಳು ಪ್ರತಿನಿಧಿಸುವ ಪರಿಮಾಣಗಳನ್ನು ಗಮನಿಸಲು ಮಕ್ಕಳಿಗೆ ಸಹಾಯ ಮಾಡಿ. 1 ನೂರು, 1 ಹತ್ತು ಮತ್ತು 0 ಗಿಂತ ಹೆಚ್ಚು ಎಂಬುದನ್ನು ತಿಳಿಯಲು ಡೀನ್ ಬ್ಲಾಕ್ ಪ್ರತಿನಿಧಿಸುವಿಕೆಯನ್ನು ಉಪಯೋಗಿಸಿ ಸಹಾಯ ಮಾಡಿ. ಇದನ್ನೇ 1 ಹತ್ತು, 1 ಸೊನ್ನೆಗಿಂತ ಹೆಚ್ಚು ಎಂಬುದಕ್ಕೂ ಮಾಡಿ.

7 ರಕ್ಷಾ ಬಂಧನ

S8G3I6





ನಾಳೆ ಗೋಪಾಲನ ನೆಚ್ಚಿನ ಹಬ್ಬ.

ಗೋಪಾಲ್ ಮತ್ತು ಧಾರ ತುಂಬಾ ಉತ್ಸುಕರಾಗಿದ್ದಾರೆ. ಇಂದು ಅವರ ಪ್ರೀತಿಯ ಅತ್ತೆ (ತಂದೆಯ ಸಹೋದರಿ) ಅವರನ್ನು ಭೇಟಿ ಮಾಡುತ್ತಿದ್ದಾರೆ. ಅವರು ತಮ್ಮ ಮನೆಯನ್ನು ಸ್ವಚ್ಛಗೊಳಿಸಿ ಅಲಂಕರಿಸಿದ್ದಾರೆ.

ಗೋಪಾಲ್ ಅವರ ಮನೆಯನ್ನು ಜಾಗರೂಕವಾಗಿ ಗಮನಿಸಿ.

ನಿಮಗೆ ಇಲ್ಲಿ ಏನು ಆಸಕ್ತಿದಾಯಕವಾಗಿ ಕಾಣುತ್ತಿದೆ?

.....


ಪ್ರತಿ ವಸ್ತುವನ್ನು ಹುಡುಕಿ ಎಷ್ಟು ಸಂಖ್ಯೆಯಲ್ಲಿದೆ ಎಂದು ಎಣಿಸಿ ಬರೆಯಿರಿ.

ಎಲೆಗಳು ◯ ಲೋಟಗಳು ◯ ದಾಳಿಂಬೆ ◯ ಹೂಗಳು ◯

ಆಚರಣೆ ಪ್ರಾರಂಭವಾಗುತ್ತದೆ!


ಧಾರಾಳ ತಾಯಿ ಹಬ್ಬಕ್ಕಾಗಿ ಕೆಲವು ಸಾಮಗ್ರಿಗಳನ್ನು ತಂದಿದ್ದಾರೆ. ಅವರು, ಸಿದ್ಧತೆ ನಡೆಸುತ್ತಿರುವ ಹಬ್ಬವನ್ನು ಊಹಿಸಿ.





ನಾವು ರಾಖಿಗಳನ್ನು ಮಾಡೋಣ









ಅವರಿಗೆ ಎಷ್ಟು ದಾರಗಳು, ಹೂಗಳು ಮತ್ತು ಮಣಿಗಳು ಬೇಕಾಗಿವೆ?





ಧಾರಾ ಹೀಗೆ ತೆಗೆದುಕೊಳ್ಳುತ್ತಾಳೆ.




1 + 1 + 1 + 1 + 1 = ...

ಇದನ್ನು 5 ಬಾರಿ 1 ಎಂದೂ ಹೇಳಬಹುದು.

ಅಥವಾ $5 \times 1 = 5$

5 ರಾಖಿಗಳಿಗೆ, ನಮಗೆ ..... ಹೂಗಳು ಬೇಕು.



ಧಾರಾ ಹೀಗೆ ತೆಗೆದುಕೊಳ್ಳುತ್ತಾಳೆ.





2 + 2 + 2 + 2 + 2 = ...

ಅಥವಾ 5 ಬಾರಿ 2

ಅಥವಾ 5 x 2

5 ರಾಖಿಗಳಿಗೆ, ನಮಗೆ ..... ದಾರಗಳು ಬೇಕಾಗಿವೆ.





4 + 4 + 4 + 4 + 4 = ...

ಅಥವಾ 5 ಬಾರಿ 4

ಅಥವಾ 5 x 4

5 ರಾಖಿಗಳಿಗೆ, ನಮಗೆ ..... ಮಣಿಗಳು ಬೇಕಾಗಿವೆ.



ಇದನ್ನು ಪ್ರಯತ್ನಿಸಿ !


ಅಂತಹ 10 ರಾಖಿಗಳನ್ನು ತಯಾರಿಸಲು ನಮಗೆ ..... ಹೂಗಳು ..... ದಾರಗಳು ಮತ್ತು ..... ಮಣಿಗಳ ಅಗತ್ಯವಿದೆ.

30 ಹೂಗಳು, 30 ದಾರಗಳು ಮತ್ತು 30 ಮಣಿಗಳಿವೆ. ಈ ವಸ್ತುಗಳಿಂದ ನೀವು ಎಷ್ಟು ರಾಖಿಗಳನ್ನು ತಯಾರಿಸಬಹುದು? ಉತ್ತರವನ್ನು ಪಡೆಯಲು ಅಗತ್ಯವಿದ್ದಲ್ಲಿ ರೇಖಾಚಿತ್ರಗಳನ್ನು ಬಳಸಬಹುದು.


ಮೋಜಿನ ಚಟುವಟಿಕೆ

ವರ್ಣರಂಜಿತ ರಾಖಿಯನ್ನು ನಿಮ್ಮ ಮನೆಯಲ್ಲಿ ತಯಾರಿಸಿ. ಅದನ್ನು ತರಗತಿಯಲ್ಲಿ ತೋರಿಸಿ.

ಜಗನ್ನಾಥ ಸಿಹಿ ಅಂಗಡಿ



ಈ ಪೆಟ್ಟಿಗೆಯಲ್ಲಿರುವ ಲಡ್ಡುಗಳನ್ನು ಹೇಗೆ ಎಣಿಸುತ್ತೇವೆ?




$3 + 3 + 3 = ...$

ಅಥವಾ ಮೂರು ಬಾರಿ ಮೂರು ಅಂದರೆ 9 ಕ್ಕೆ ಸಮ

ಅಥವಾ, $3 \times 3 = ...$

ಈ ಬಾಕ್ಸ್‌ನಲ್ಲಿ ..... ಲಡ್ಡುಗಳಿವೆ.





$9 + 9 = 18$


2 ಬಾರಿ ಒಂಭತ್ತು ಅಂದರೆ 18ಕ್ಕೆ ಸಮ.
$2 \times 9 = 18$
ಅಲ್ಲಿ 18 ಲಡ್ಡುಗಳಿವೆ.

$3 + 3 + 3 + 3 + 3 + 3 = ...$

ಅಥವಾ, 6 ಬಾರಿ 3 ಅಂದರೆ 18ಕ್ಕೆ ಸಮ.
ಅಥವಾ, $6 \times 3 = 18$
ಅಲ್ಲಿ 18 ಲಡ್ಡುಗಳಿವೆ.





ಅತ್ಯಾ ಮತ್ತು ಮಕ್ಕಳು ಬಂದ ನಂತರ ನಾವು ಮನೆಯಲ್ಲಿ 9 ಜನರಾಗುತ್ತೇವೆ. ಎಲ್ಲರಿಗೂ 18 ಲಡ್ಡುಗಳನ್ನು ಸಮನಾಗಿ ಹಂಚಿದಾಗ ಪ್ರತಿಯೊಬ್ಬರು ಎಷ್ಟು ಲಡ್ಡುಗಳನ್ನು ಪಡೆಯುತ್ತೇವೆ?




ಇದನ್ನು ಕಂಡುಹಿಡಿಯಲು ನೀವು ಧಾರಾಗೆ ಸಹಾಯ ಮಾಡಬಲ್ಲಿರಾ?


ನೀವೇ ಧಾರಾ ಎಂದು ಊಹಿಸಿಕೊಳ್ಳಿ. 18 ಲಡ್ಡುಗಳನ್ನು ಸಮನಾಗಿ ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಧಾರಾ ಅದನ್ನು ಹೇಗೆ ಮಾಡಿದ್ದಾಳೆಂದು ನೋಡೋಣ.









ಉಳಿದ ಪದಾರ್ಥಗಳು:





ಉಳಿದ ಪದಾರ್ಥಗಳು:




18 ಲಡ್ಡುಗಳನ್ನು 9 ಜನರಿಗೆ ಸಮವಾಗಿ ಹಂಚಿದಾಗ ಪ್ರತಿಯೊಬ್ಬರಿಗೂ ..... ಲಡ್ಡುಗಳು ಸಿಗುತ್ತವೆ.

18 ಲಡ್ಡುಗಳನ್ನು 9 ಜನರು ಸಮವಾಗಿ ಹಂಚಿಕೊಂಡಾಗ ಪ್ರತಿಯೊಬ್ಬರಿಗೆ 2 ಸಿಗುವುದು. ಅಥವಾ $18 \div 9 = 2$ ಲಡ್ಡುಗಳು.

ಇದನ್ನು ಪ್ರಯತ್ನಿಸಿ!

ಆಕೃತಿಯನ್ನು ಎಚ್ಚರಿಕೆಯಿಂದ ಗಮನಿಸಿ. ಕಾಜು ಕಟ್ಲೆಸ್‌ಗಳ ಸಂಖ್ಯೆಯನ್ನು ಅಂದಾಜು ಮಾಡಿ.




ಕಾಜು ಕಟ್ಲೆಸ್‌ಗಳ ಸಂಖ್ಯೆಯನ್ನು ಎಣಿಸಿ ಬರೆಯಿರಿ.

ಕಾಜು ಕಟ್ಲೆಸ್‌ಗಳ ಒಟ್ಟು ಸಂಖ್ಯೆ = ...

ಎಲ್ಲಾ ಕಾಜು ಕಟ್ಲೆಸ್‌ಗಳನ್ನು 5 ಜನರಿಗೆ ಸಮವಾಗಿ ಹಂಚಿ. ನೀವು ಇದನ್ನು ಮಾಡಲು ಕಾಜು ಕಟ್ಲೆಸ್‌ಗಳನ್ನು ಪ್ಲೇಟುಗಳಲ್ಲಿ ಚಿತ್ರಿಸಬಹುದು. ಪ್ರತಿಯೊಬ್ಬರೂ ಎಷ್ಟು ಪಡೆಯುತ್ತಾರೆ? ನಿಮ್ಮ ಕೆಲಸವನ್ನು ಧಾರಾಳ ಕೆಲಸದೊಂದಿಗೆ ಹೋಲಿಸಿ.


1 1 1 1 1



ಉಳಿದ ಪದಾರ್ಥಗಳು:

$$\begin{array}{r} 20 \\ -\ \ 5 \\ \hline \\ \hline \end{array}$$


1 + 1 1 + 1 1 + 1 1 + 1 1 + 1



ಉಳಿದ ಪದಾರ್ಥಗಳು:

$$\begin{array}{r} 20 \\ -\ \ 5 \\ \hline 15 \\ -\ \ 5 \\ \hline 10 \end{array}$$

1 + 1 + 1 1 + 1 + 1 1 + 1 + 1 1 + 1 + 1 1 + 1 + 1



	2	0
–		5
	1	5
–		5
	1	0
–		5
		5

ಉಳಿದ ಪದಾರ್ಥಗಳು:

1 + 1 + 1 + 1 1 + 1 + 1 + 1 1 + 1 + 1 + 1 1 + 1 + 1 + 1 1 + 1 + 1 + 1

	2	0
–		5
	1	5
–		5
	1	0
–		5
		5
–		5
		0


ಉಳಿದ ಪದಾರ್ಥಗಳು:

20 ನ್ನು 5 ಜನರು ಸಮವಾಗಿ ಹಂಚಿಕೊಂಡಾಗ ಪ್ರತಿಯೊಬ್ಬರಿಗೆ 4 ಸಿಗುವುದು.

$20 \div 5 = 4$


ನಾವು ಮಾಡೋಣ

1. ಎಲ್ಲಾ ಕಾಜು ಕಟ್ಲೆಸ್‌ಗಳನ್ನು 4 ಜನರಿಗೆ ಸಮವಾಗಿ ಹಂಚಿ. ಪ್ರತಿಯೊಬ್ಬರಿಗೂ ಎಷ್ಟು ಕಾಜು ಕಟ್ಲೆಸ್‌ಗಳು ಸಿಗುತ್ತವೆ?
ಮುಂದೆ ನೀಡಿರುವ ಚಿತ್ರದಲ್ಲಿ ಇದನ್ನು ಮಾಡೋಣ. ಟ್ರೇಗಳಲ್ಲಿನ ಕಾಜು ಕಟ್ಲೆಸ್‌ಗಳಿಗೆ ಅಡ್ಡಗೆರೆ ಎಳೆಯಿರಿ. ಅವುಗಳನ್ನು ಪ್ಲೇಟ್‌ಗಳಲ್ಲಿ ಚಿತ್ರಿಸಿ.




ನಿಮಗಾಗಿ ಮೊದಲ ಹಂತವನ್ನು ಮಾಡಲಾಗಿದೆ.

1 1 1 1




ಉಳಿದ ಪದಾರ್ಥಗಳು:

1	6
–	4




ಉಳಿದ ಪದಾರ್ಥಗಳು:

1	2
–	



ಉಳಿದ ಪದಾರ್ಥಗಳು:

	8
–	



ಉಳಿದ ಪದಾರ್ಥಗಳು:


	4
–	

ಪ್ರತಿಯೊಬ್ಬರಿಗೂ ..... ಕಾಜು ಕಟ್ಲೆಸ್‌ಗಳು ಸಿಗುತ್ತವೆ.


16 ÷ 4 = ...

2. ಪ್ಲೇಟ್‌ನಲ್ಲಿರುವ ಎಲ್ಲಾ 15 ಪೇಡಾಗಳನ್ನು 5 ಜನರಿಗೆ ಸಮನಾಗಿ ಹಂಚಿ. ಪ್ರತಿಯೊಬ್ಬರಿಗೂ ಎಷ್ಟು ಪೇಡಾಗಳು ಸಿಗುತ್ತವೆ?

ಒಟ್ಟು ಪೇಡಾಗಳು:



	1	5
–		5
–		
–		




15 ನ್ನು 5 ಜನರು ಸಮನಾಗಿ ಹಂಚಿಕೊಂಡಾಗ ಪ್ರತಿಯೊಬ್ಬರಿಗೂ ..... ಸಿಗುವುದು.


15 ÷ 5 = ...



ನಾವು ಯೋಚಿಸೋಣ

1. ಪ್ರತಿ ಸೈಕಲ್‌ಗೆ 2 ಚಕ್ರಗಳು ಬೇಕಾಗುತ್ತವೆ. 12 ಚಕ್ರಗಳಿಂದ ಎಷ್ಟು ಸೈಕಲ್‌ಗಳನ್ನು ಜೋಡಿಸಬಹುದು?





12 ನ್ನು 2 ರಿಂದ ಸಮನಾಗಿ ಭಾಗಿಸಿದರೆ ..... .

$12 \div 2 =$ ..... .

2. ಚಿತ್ರವನ್ನು ಜಾಗರೂಕವಾಗಿ ಗಮನಿಸಿ. ಜಿಲೇಬಿಗಳ ಸಂಖ್ಯೆಯನ್ನು ಎಣಿಸಿ.



ಅಲ್ಲಿ ..... ಜಿಲೇಬಿಗಳಿವೆ.

ನೀವು ಹೇಗೆ ಎಣಿಸಿದಿರಿ? ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ.


ಗುಂಪುಗಳಲ್ಲಿ ಎಣಿಸುವಾಗ ತಲಾ ನಾಲ್ಕು ಜಿಲೇಬಿಗಳ ಆರು ಗುಂಪುಗಳನ್ನು ನಾವು ನೋಡುತ್ತೇವೆ.



ಅಥವಾ $4 + 4 + 4 + 4 + 4 + 4 =$ .....




ಅಥವಾ ..... $\times 4 =$ ..... ಜಿಲೇಬಿಗಳು.



ಧಾರಾಳ ಕುಟುಂಬದಲ್ಲಿ ಎಲ್ಲರಿಗೂ 4 ಜಿಲೇಬಿಗಳು ಸಿಗುವಷ್ಟು ಜಿಲೇಬಿಗಳಿವೆಯೇ? ತರಗತಿಯಲ್ಲಿ ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

ಪ್ರತಿಯೊಬ್ಬರಿಗೂ ನಾಲ್ಕು ಜಿಲೇಬಿಗಳು ಸಿಗುವಂತಾಗಲು ಧಾರಾ ಎಷ್ಟು ಜಿಲೇಬಿಗಳನ್ನು ಖರೀದಿಸಬೇಕು?

ಉದ್ಯಾನದಲ್ಲಿರುವ ಸಸ್ಯಗಳು



ಧಾರಾ ಮತ್ತು ಗೋಪಾಲ್ ಮನೆಗೆ ಹೋಗುವ ದಾರಿಯಲ್ಲಿ ಹೂಗಳ ಸಾಲನ್ನು ನೋಡುತ್ತಾರೆ.

ಧಾರಾ: ಸಸ್ಯಗಳ ಸಂಖ್ಯೆ ಈ ರೀತಿ ಇದೆ.

$6 + 6 + 6 + 6 + 6 + 6 + 6 + 6 = ...$

8 ಬಾರಿ 6 =

$8 \times 6 =$


$= 6 \times 8$

ಗೋಪಾಲ್: ಅಲ್ಲ! ಇವು $8 + 8 + 8 + 8 + 8 + 8$


$= 6 \times 8$

ಯಾರು ಸರಿ ಎಂದು ನೀವು ಭಾವಿಸುತ್ತೀರಿ?

ಗುಂಪುಗಳನ್ನಾಗಿಸುವ ಬೇರೆ ಬೇರೆ ವಿಧಾನಗಳು.




ಧಾರಾ
8 × 6



ಧಾರಾ
6 × 8


ಸಮವಾಗಿರುವ ಈ ಗುಂಪುಗಳನ್ನು ಪೂರ್ಣಗೊಳಿಸಿ, ಅದನ್ನು ಗುಣಾಕಾರವಾಗಿ ಬರೆಯಬಲ್ಲಿರಾ?

ನೀವು ವಿವಿಧ ಗಾತ್ರಗಳ ಸಮವಾದ ಇನ್ನೂ ಕೆಲವು ಗುಂಪುಗಳನ್ನು ಕಂಡುಹಿಡಿಯಬಹುದೆ? ಅವುಗಳನ್ನು ರಚಿಸಿ ಮತ್ತು ಗುಣಕಾರವಾಗಿ ಬರೆಯಿರಿ.



ಫಾರ್ಮ್‌ಗೆ ಭೇಟಿ

ಮರುದಿನ ಮಕ್ಕಳು ತಮ್ಮ ತಂದೆ ಮತ್ತು ಸೋದರ ಸಂಬಂಧಿಗಳನ್ನು ಫಾರ್ಮ್‌ಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಅವರು ಸಾಕಷ್ಟು ಕೋಳಿ ಮರಿಗಳನ್ನು ನೋಡುತ್ತಾರೆ. ಫಾರ್ಮ್‌ನಲ್ಲಿರುವ ಕೋಳಿ ಮರಿಗಳನ್ನು ಎಣಿಸೋಣ.



1 ಬಾರಿ 2	2 ಆಗುತ್ತದೆ	ಅಥವಾ 1 × 2	= 2 1 1
2 ಬಾರಿ 2	4 ಆಗುತ್ತದೆ	ಅಥವಾ 2 × 2	= 4
3 ಬಾರಿ 2	6 ಆಗುತ್ತದೆ	ಅಥವಾ 3 × 2	= 6
4 ಬಾರಿ 2	.....ಆಗುತ್ತದೆ	ಅಥವಾ 4 × 2	= .....
5 ಬಾರಿ 2	.....ಆಗುತ್ತದೆ	ಅಥವಾ 5 × 2	= .....
6 ಬಾರಿ 2	.....ಆಗುತ್ತದೆ	ಅಥವಾ 6 × 2	= .....
..... ಬಾರಿ 2	.....ಆಗುತ್ತದೆ	ಅಥವಾ × 2	= .....
..... ಬಾರಿ	.....ಆಗುತ್ತದೆ	ಅಥವಾ 8 × 2	= .....
..... ಬಾರಿ	.....ಆಗುತ್ತದೆ	ಅಥವಾ 9 × 2	= .....
..... ಬಾರಿ	.....ಆಗುತ್ತದೆ	ಅಥವಾ 10 × 2	= .....


ತಪ್ಪಿಸಿ ಜಿಗಿಯುವ ಆಟ

ಸಂಜೆ, ಕುಟುಂಬದವರೆಲ್ಲ ಆಟದ ಮೈದಾನಕ್ಕೆ ಹೋಗುತ್ತಾರೆ.


ಅತ್ಯಾ ನೆಲದ ಮೇಲೆ ವಕ್ರಸಂಖ್ಯಾ ಹಳಿಯನ್ನು ಕೋಲಿನಿಂದ ಎಳೆಯುತ್ತಾರೆ. ಧಾರಾಳಿಗೆ ಅದರಲ್ಲಿ '0' ಯಿಂದ ಸಂಖ್ಯೆಗಳನ್ನು ಬರೆಯಲು ಹೇಳುತ್ತಾಳೆ.







0 ಯಿಂದ ಪ್ರಾರಂಭಿಸಿ ಧಾರಾ 3 ಕ್ಕೆ ಜಿಗಿಯುತ್ತಾಳೆ. 3 ರಿಂದ ಅವಳು 6 ಕ್ಕೆ ಹೋಗುತ್ತಾಳೆ. 6 ರಿಂದ ಅವಳು 9 ಕ್ಕೆ ಹೋಗುತ್ತಾಳೆ. ಈಗ 9 ರ ನಂತರ ಧಾರಾ ಹೇಗೆ ಜಿಗಿಯುತ್ತಾಳೆ ಎಂಬುದನ್ನು ನೋಡಲು ಮುಂದುವರೆಸಿ.



ಧಾರಾಳ ತಪ್ಪಿಸಿ ಜಿಗಿಯುವಿಕೆಯು 3 ರಿಂದ ಆಗಿದೆ.

ಜಿಗಿತಗಳ ಸಂಖ್ಯೆ		ತಲುಪಿದ ಸಂಖ್ಯೆ
1 ಜಿಗಿತ	→	3
2 ಜಿಗಿತಗಳು	→	3 + 3 = 6 = 2 x 3
3 ಜಿಗಿತಗಳು	→	3 + 3 + 3 = 9 = 3 x 3
4 ಜಿಗಿತಗಳು	→	.....
5 ಜಿಗಿತಗಳು	→	.....
6 ಜಿಗಿತಗಳು	→	.....
7 ಜಿಗಿತಗಳು	→	.....
8 ಜಿಗಿತಗಳು	→	.....
9 ಜಿಗಿತಗಳು	→	.....
10 ಜಿಗಿತಗಳು	→	.....



ನಾವು ಮಾಡೋಣ


1. ಅವಳು ಜಿಗಿಯುವ ಮುಂದಿನ ಸಂಖ್ಯೆಯನ್ನು ಊಹಿಸಿ ಬರೆಯಿರಿ.

   .....

2. 3, 6, 9..... ಈ ಸಂಖ್ಯೆಗಳಲ್ಲಿ ಒಂದು ವಿನ್ಯಾಸ ಇದೆಯೇ?

3. ಪ್ರತಿ ಬಾರಿ ಧಾರಾ ಎಷ್ಟು ಹೆಜ್ಜೆ ಮುಂದೆ ಜಿಗಿಯುತ್ತಿದ್ದಾಳೆ?

4. ಸಂಖ್ಯಾ ಹಳಿಯ ಮೇಲೆ ತಪ್ಪಿಸಿ ಜಿಗಿಯುವ ಆಟವನ್ನು 6 ರಿಂದ ಮುಂದುವರೆಸಿ.



5. ಈ ತಪ್ಪಿಸಿ ಜಿಗಿಯುವಿಕೆಯನ್ನು 6ರ ಮಗ್ಗಿ ರಚಿಸಲು ಉಪಯೋಗಿಸಬಹುದೇ? ನಿಮ್ಮ ನೋಟ್‌ಬುಕ್‌ನಲ್ಲಿ 6ರ ಮಗ್ಗಿ ಬರೆಯಿರಿ.


6. ಇಲ್ಲಿ ಪುನರಾವರ್ತಿತ ಕೂಡುವಿಕೆ ನಡೆಯುತ್ತಿದೆಯೇ? ಮುಂದೆ ನೀಡಲಾದ ಚಿತ್ರದಲ್ಲಿ ಪುನರಾವರ್ತಿತ ಕೂಡುವಿಕೆಯಿಂದ 4ರ ಮಗ್ಗಿ ಮಾಡಿ.



4 4 + 4

0	1	2	3	4	5	6	7	8	9	10	11	12	13	14	15
		1 × 4				2 × 4									16
32	31	30	29	28	27	26	25	24	23	22	21	20	19	18	17
33															
34	35	36	37	38	39	40	41	42	43	44	45	46	47	48	49
															50

7.



ಗೋಪಾಲ್ ತಪ್ಪಿಸಿ ಜಿಗಿಯುವಿಕೆಯನ್ನು ..... ಹೆಜ್ಜೆಗಳಲ್ಲಿ ಮಾಡುತ್ತಿದ್ದಾನೆ.

27ರ ನಂತರ ಅವನು ....., ... ಮೇಲೆ ಜಿಗಿಯುತ್ತಾನೆ.

8. ಗೋಪಾಲ್‌ನ ಜಿಗಿತಗಳಿಂದ ನೀವು ಯಾವ ಮಗ್ಗಿಯನ್ನು ರಚಿಸಬಹುದು? ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ.

9. ಧಾರಾ ಸಹ ತಪ್ಪಿಸಿ ಜಿಗಿಯುವಿಕೆಯನ್ನು ಮಾಡುತ್ತಿದ್ದಾಳೆ. ಗೋಪಾಲ್ ಆ ಜಿಗಿತಗಳನ್ನು ಬರೆದಿದ್ದಾನೆ. ಆದರೆ ಅವನಿಗೆ ಮೊದಲ ಕೆಲವು ಸಂಖ್ಯೆಗಳು ತಪ್ಪಿಹೋಗಿವೆ.

 32, 40, 48, 56

ಧಾರಾ ಯಾವ ಸಂಖ್ಯೆಯಿಂದ ತಪ್ಪಿಸಿ ಜಿಗಿಯುವಿಕೆಯನ್ನು ಮಾಡಿದ್ದಾಳೆ? ಈ ಸಂಖ್ಯೆಯ ಮಗ್ಗಿಯನ್ನು ನಿಮ್ಮ ನೋಟ್‌ಪುಸ್ತಕದಲ್ಲಿ ರಚಿಸಿ.



ನಾವು ಆಡೋಣ

ಅತ್ಯಾ 12ರ ಮೇಲೆ ಹೂ ಇಡುತ್ತಾರೆ.

ಹೂವನ್ನು ತಲುಪಲು ಸಮಾನ ತಪ್ಪಿಸಿ ಜಿಗಿಯುವಿಕೆಯನ್ನು ಮಾಡಿ.

ಹೂವಿಗೆ ನೇರ ಜಿಗಿತವನ್ನು ಅನುಮತಿಸಲಾಗುವುದಿಲ್ಲ.

ಕಡಿಮೆ ಸಂಖ್ಯೆಯ ಜಿಗಿತಗಳನ್ನು ಮಾಡಿ ಹೂವನ್ನು ತಲುಪಿದವರು ಗೆಲ್ಲುತ್ತಾರೆ.

ನೀವು ಯಾವ ಸಂಖ್ಯೆಯ ತಪ್ಪಿಸಿ ಜಿಗಿಯುವಿಕೆಯನ್ನು ಆರಿಸುತ್ತೀರಿ?



ಸಂಖ್ಯಾ ಹಳಿಯ ಬೇರೆ ಬೇರೆ ಸಂಖ್ಯೆಗಳ ಮೇಲೆ ಹೂ ಇಡುವ ಮೂಲಕ ನಿಮ್ಮ ಸ್ನೇಹಿತರೊಂದಿಗೆ ಈ ಆಟವನ್ನು ಆಡಿ. ಯಾರು ಕನಿಷ್ಠ ಜಿಗಿತಗಳ ಮೂಲಕ ಸಂಖ್ಯೆಯನ್ನು ತಲುಪಲು ಸಾಧ್ಯ ಎಂಬುದನ್ನು ನೋಡಿ.

ಕೇವಲ 1 ತಪ್ಪಿಸಿ ಜಿಗಿಯುವಿಕೆಯಿಂದ ತಲುಪಬಹುದಾದ ಸಂಖ್ಯೆಗಳಿವೆಯೇ? ಅಂತಹ 3 ಸಂಖ್ಯೆಗಳನ್ನು ಕಂಡುಹಿಡಿಯಿರಿ.


ಕೋಷ್ಟಕವನ್ನು ಬರೆಯುವ ಮೋಜಿನ ಮಾರ್ಗ

ಡ್ರಾಯಿಂಗ್ ಕೋಲುಗಳ ಮೂಲಕ ಮಿಥು ಗುಣಾಕಾರ ಕೋಷ್ಟಕಗಳನ್ನು ಬರೆಯುವ ಇನ್ನೊಂದು ವಿಧಾನವನ್ನು ಕಂಡುಹಿಡಿಯುತ್ತಾನೆ.

ಮಿಥು ಬಳಿ ಕೆಲವು ಕಡ್ಡಿಗಳಿದ್ದವು.

ಅವನು ಅವುಗಳನ್ನು ಈ ರೀತಿ ಜೋಡಿಸಿದನು:


ಕಡ್ಡಿಗಳ ಛೇದಕವನ್ನು ತೋರಿಸುವ ಕೆಂಪು ಚುಕ್ಕೆಗಳನ್ನು ಅವನು ಎಣಿಸಿದನು.






ಕಡ್ಡಿಗಳಿಂದ 5ರ ಮಗ್ಗಿಯನ್ನು ಮಾಡಲು ಪ್ರಯತ್ನಿಸೋಣ.

1 ಬಾರಿ 5 = 5



2 ಬಾರಿ 5 = 10



1 × 5 = 5

2 × 5 = 10

3 × 5 = 15

4 × 5 =

5 × 5 =


6 × 5 =


7 × 5 =

8 × 5 =

9 × 5 =

3 ಬಾರಿ 5 = 15





ಕಡ್ಡಿಗಳನ್ನು ಬಳಸಿ 5ರ ಮಗ್ಗಿಯನ್ನು ಪೂರ್ಣಗೊಳಿಸಿ.

ಮೇಲೆ ತೋರಿಸಿದ ಕಡ್ಡಿಗಳ ವಿಧಾನವನ್ನು ಬಳಸಿ 6 ಮತ್ತು 10ರ ಮಗ್ಗಿಗಳನ್ನು ಮಾಡಿ.

ಗುಣಾಕಾರದ ಕೋಷ್ಟಕಗಳು

1 × 1 = 1	1 × 2 = 2	1 × 3 = 3	1 × 4 = 4	1 × 5 = 5
2 × 1 = 2	2 × 2 = 4	2 × 3 = 6	2 × 4 = 8	2 × 5 = 10
3 × 1 = 3	3 × 2 = 6	3 × 3 = 9	3 × 4 = 12	3 × 5 = 15
4 × 1 = 4	4 × 2 = 8	4 × 3 = 12	4 × 4 = 16	4 × 5 = 20
5 × 1 = 5	5 × 2 = 10	5 × 3 = 15	5 × 4 = 20	5 × 5 = 25
6 × 1 = 6	6 × 2 = 12	6 × 3 = 18	6 × 4 = 24	6 × 5 = 30
7 × 1 = 7	7 × 2 = 14	7 × 3 = 21	7 × 4 = 28	7 × 5 = 35
8 × 1 = 8	8 × 2 = 16	8 × 3 = 24	8 × 4 = 32	8 × 5 = 40
9 × 1 = 9	9 × 2 = 18	9 × 3 = 27	9 × 4 = 36	9 × 5 = 45
10 × 1 = 10	10 × 2 = 20	10 × 3 = 30	10 × 4 = 40	10 × 5 = 50

1 × 6 = 6	1 × 7 = 7	1 × 8 = 8	1 × 9 = 9	1 × 10 = 10
2 × 6 = 12	2 × 7 = 14	2 × 8 = 16	2 × 9 = 18	2 × 10 = 20
3 × 6 = 18	3 × 7 = 21	3 × 8 = 24	3 × 9 = 27	3 × 10 = 30
4 × 6 = 24	4 × 7 = 28	4 × 8 = 32	4 × 9 = 36	4 × 10 = 40
5 × 6 = 30	5 × 7 = 35	5 × 8 = 40	5 × 9 = 45	5 × 10 = 50
6 × 6 = 36	6 × 7 = 42	6 × 8 = 48	6 × 9 = 54	6 × 10 = 60
7 × 6 = 42	7 × 7 = 49	7 × 8 = 56	7 × 9 = 63	7 × 10 = 70
8 × 6 = 48	8 × 7 = 56	8 × 8 = 64	8 × 9 = 72	8 × 10 = 80
9 × 6 = 54	9 × 7 = 63	9 × 8 = 72	9 × 9 = 81	9 × 10 = 90
10 × 6 = 60	10 × 7 = 70	10 × 8 = 80	10 × 9 = 90	10 × 10 = 100

ಗುಣಾಕಾರ ಕೋಷ್ಟಕಗಳಲ್ಲಿ ವಿನ್ಯಾಸಗಳನ್ನು ಗಮನಿಸುವುದು

5 ರ ಮಗ್ಗಿಯನ್ನು ನೋಡಿ. ನೀವು ಯಾವ ವಿನ್ಯಾಸಗಳನ್ನು ಗಮನಿಸುವಿರಿ?

11 x 5 ಮತ್ತು 12 x 5 ರ ಕೊನೆಯ ಅಂಕಿಗಳು ಏನೆಂದು ಊಹಿಸಿ.

5 ಬಾರಿ ತೆಗೆದುಕೊಂಡಾಗ ಉತ್ತರವು ಈ ರೀತಿ ಕೊನೆಗೊಳ್ಳುವ ಸಂಖ್ಯೆಗಳ 3 ಉದಾಹರಣೆಗಳನ್ನು ನೀಡಿ.

(i) 0 ....

(ii) 5 ....

ಉತ್ತರವನ್ನು ಕಂಡುಹಿಡಿಯದೆ, ನೀವು 18 x 5, 23 x 5, 32 x 5, 50 x 5 ರ ಕೊನೆಯ ಅಂಕಿಗಳನ್ನು ಹೇಳಬಲ್ಲಿರಾ?

2, 3, 5 ಮಗ್ಗಿಗಳನ್ನು ಗಮನಿಸಿ. ಅವುಗಳ ನಡುವೆ ಒಂದು ಸಂಬಂಧವಿದೆ. ನೀವು ಅದನ್ನು ಗಮನಿಸಿದಿರಾ?

$1 \times 2 = 2$	$1 \times 3 = 3$	$1 \times 5 = 5$
$2 \times 2 = 4$	$2 \times 3 = 6$	$2 \times 5 = 10$
$3 \times 2 = 6$	$3 \times 3 = 9$	$3 \times 5 = 15$
$4 \times 2 = 8$	$4 \times 3 = 12$	$4 \times 5 = 20$

ವೃತ್ತ ಎಳೆದಿರುವ ಎರಡು ಸಂಖ್ಯೆಗಳು ಮತ್ತು ಬಾಕ್ಸ್‌ನಲ್ಲಿರುವ ಸಂಖ್ಯೆಗಳ ನಡುವೆ ಯಾವುದಾದರೂ ಸಂಬಂಧವಿದೆಯೇ? ಮುಂದಿನ ಸಾಲುಗಳಲ್ಲೂ ಇದು ಸಾಧ್ಯವೆ?

ಎರಡು ಮಗ್ಗಿಗಳು ಸೇರಿ ಮೂರನೇ ಮಗ್ಗಿಯಾಗುವ ಇತರೆ ಉದಾಹರಣೆಗಳನ್ನು ನೀವು ಕಂಡುಹಿಡಿಯಬಲ್ಲಿರಾ?



ನಾವು ಮಾಡೋಣ

1. ಮುಂದಿನ ಪ್ರತಿ ಸಮಸ್ಯೆಗೆ ನಿಮ್ಮ ನೋಟ್‌ಪುಸ್ತಕದಲ್ಲಿ ಚಿತ್ರಗಳನ್ನು ರಚಿಸಿ. ಎಣಿಸುವುದು, ಸಂಖ್ಯಾರೇಖೆ ಜಿಗಿತಗಳು ಅಥವಾ ಇತರೆ ಯಾವುದೇ ವಿಧಾನ ಬಳಸಿ ಸಮಸ್ಯೆಗಳನ್ನು ಪರಿಹರಿಸಿ.

   a. ಪ್ರತಿ ಜಾಡಿಯಲ್ಲಿ 4 ಕುಕ್ಕೀಸ್‌ಗಳಂತೆ 5 ಜಾಡಿಗಳಿವೆ. ಒಟ್ಟು ಎಷ್ಟು ಕುಕ್ಕೀಸ್‌ಗಳಿವೆ?

b. ಒಂದು ಇಡ್ಲಿ ಪಾತ್ರೆಯಲ್ಲಿ 6 ಇಡ್ಲಿ ತಟ್ಟೆಗಳಿವೆ. ಪ್ರತಿ ತಟ್ಟೆಯಲ್ಲಿ ನಾವು 4 ಇಡ್ಲಿಗಳನ್ನು ಮಾಡಬಹುದು. ಒಂದು ಬಾರಿಗೆ ಎಷ್ಟು ಇಡ್ಲಿಗಳನ್ನು ಬೇಯಿಸಬಹುದು?

c. 30 ಕುಕ್ಕೀಸ್‌ಗಳನ್ನು 5 ಮಕ್ಕಳಿಗೆ ಸಮವಾಗಿ ಹಂಚಬೇಕು. ಪ್ರತಿ ಮಗು ಎಷ್ಟು ಕುಕ್ಕೀಸ್‌ಗಳನ್ನು ಪಡೆಯುತ್ತದೆ?

d. ರೋರೋ 0 ಯಿಂದ ಪ್ರಾರಂಭಿಸಿ 18 ನ್ನು ತಲುಪಲು 6 ಜಿಗಿತಗಳನ್ನು ತೆಗೆದುಕೊಳ್ಳುತ್ತಾನೆ. ಅವನ ಎಲ್ಲಾ ಜಿಗಿತಗಳು ಒಂದೇ ಗಾತ್ರದಲ್ಲಿರುತ್ತವೆ. ರೋರೋನ ಜಿಗಿತದ ಗಾತ್ರ ಎಷ್ಟು?

e. ಟೋಟೋ ಒಂದೇ ಗಾತ್ರದ ಜಿಗಿತಗಳನ್ನು ತೆಗೆದುಕೊಳ್ಳದೇ 18 ನ್ನು 6 ಜಿಗಿತಗಳಲ್ಲಿ ತಲುಪುವನು. ಟೋಟೋ ಹೇಗೆ ಜಿಗಿದನು?


f. ಸುಮ ಪ್ರತಿದಿನ ₹ 8 ಉಳಿಸುತ್ತಾಳೆ. ಎಷ್ಟು ದಿನಗಳ ನಂತರ ಅವಳಲ್ಲಿ ₹ 56 ಇರುತ್ತದೆ?

g. ಮೇರಿ ಬಳಿ 63 ಸಮುದ್ರ ಚಿಪ್ಪುಗಳಿವೆ. ಅವಳು ಪ್ರತಿಯೊಬ್ಬರಿಗೂ 7 ಚಿಪ್ಪುಗಳಂತೆ ತನ್ನ 5 ಸ್ನೇಹಿತರಿಗೆ ಹಂಚುತ್ತಾಳೆ. ಅವಳ ಬಳಿ ಎಷ್ಟು ಉಳಿದಿವೆ?

2. ಮುಂದಿನ ಸಮಸ್ಯೆಗಳನ್ನು ಬಿಡಿಸಿ. ಹೇಳಿಕೆ ರೂಪದ ಸಮಸ್ಯೆಯನ್ನು ರಚಿಸಲು ಪ್ರಯತ್ನಿಸಿ.

a. 4×9 b. $32 \div 8$ c. 6×7 d. $45 \div 5$


ಅಪ್ಪ, ನಾನು ಒಂದು ರಟ್ಟಿನ ರಥ ಮಾಡುತ್ತಿದ್ದೇನೆ. ನಾನು ರಥದ 20 ಚಕ್ರಗಳಿಗೆ ಕಡ್ಡಿಗಳನ್ನು ಮಾಡಬೇಕಿದೆ. ಪ್ರತಿ ಚಕ್ರಕ್ಕೆ 5 ಕಡ್ಡಿಗಳು ಬೇಕಾಗುತ್ತವೆ.



ಭೀಮನಿಗೆ ಸಹಾಯ ಮಾಡಿ! ಭೀಮನಿಗೆ _____ ಕಡ್ಡಿಗಳು ಬೇಕಾಗುತ್ತವೆ.

ಯೋಚಿಸಿ ಮತ್ತು ನೀವು ಉತ್ತರವನ್ನು ಹೇಗೆ ಕಂಡುಕೊಂಡಿದ್ದೀರಿ ಎಂಬುದನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಭೀಮ ಅದನ್ನು ಹೇಗೆ ಮಾಡಿದನೆಂದು ನೋಡೋಣ.

10 ಚಕ್ರಗಳಿಗೆ ಬೇಕಾಗುವ ಕಡ್ಡಿಗಳು:



5 + 5 + 5 + 5 + 5 + 5 + 5 + 5 + 5 + 5

= 10 x 5 = _____ ಕಡ್ಡಿಗಳು

ಇನ್ನೂ 10 ಚಕ್ರಗಳಿಗೆ ___ x ____ = ____ ಕಡ್ಡಿಗಳು ಬೇಕಾಗುತ್ತವೆ.

ಆದ್ದರಿಂದ ಅಗತ್ಯವಿರುವ ಒಟ್ಟು ಕಡ್ಡಿಗಳ ಸಂಖ್ಯೆ ___ + ____ = _____ ಕಡ್ಡಿಗಳು.



ಇವುಗಳನ್ನು ಪ್ರಯತ್ನಿಸಿ.

30 × 5 = ...

(**ಸುಳುಹು:** 30 ಚಕ್ರಗಳಲ್ಲಿ ಕಡ್ಡಿಗಳನ್ನು ಎಣಿಸುವ ಮೂಲಕ ನೀವು ಇದನ್ನು ಕಂಡುಹಿಡಿಯಬಹುದು)

ಮೊದಲ 10 ಚಕ್ರಗಳಲ್ಲಿ _____ ಕಡ್ಡಿಗಳಿರುತ್ತವೆ.

ನಂತರದ 10 ಚಕ್ರಗಳಲ್ಲಿ _____ ಕಡ್ಡಿಗಳಿರುತ್ತವೆ.

ನಂತರದ 10 ಚಕ್ರಗಳಲ್ಲಿ _____ ಕಡ್ಡಿಗಳಿರುತ್ತವೆ.

ಒಟ್ಟು = _____ ಕಡ್ಡಿಗಳು

30 x 5 = _____ ಕಡ್ಡಿಗಳು

ನೀವು ಇಲ್ಲಿ ಗಮನಿಸಿದ ವಿನ್ಯಾಸಗಳನ್ನು ವಿವರಿಸಿ

ಮುಂದಿನವುಗಳನ್ನು ಪೂರ್ಣಗೊಳಿಸಿ.

40 × 5 = ...	70 × 5 = ...	100 × 5 = ...
50 × 5 = ...	80 × 5 = ...	
60 × 5 = ...	90 × 5 = ...	

ಧಾರಾ 45 ಕಡ್ಡಿಗಳನ್ನು ಸಂಗ್ರಹಿಸಿದ್ದಾಳೆ. ಅವಳು ಎಷ್ಟು ಚಕ್ರಗಳನ್ನು ಮಾಡಬಹುದು?


ಧಾರಾಗೆ 10 ಚಕ್ರಗಳನ್ನು ಮಾಡಲು ಬೇಕಾಗುವಷ್ಟು ಕಡ್ಡಿಗಳಿವೆಯೆ?

10 ಕಡ್ಡಿಗಳಿಂದ, ನಾನು 2 ಚಕ್ರಗಳನ್ನು ಮಾಡಬಹುದು,
45 – 10 = 35.
ಮುಂದಿನ 10 ಕಡ್ಡಿಗಳಿಂದ, ನಾನು ಇನ್ನೂ 2 ಚಕ್ರಗಳನ್ನು ಮಾಡಬಹುದು,
35–10=25.



60 ಕಡ್ಡಿಗಳಿಂದ ನೀನು ಎಷ್ಟು ಚಕ್ರಗಳನ್ನು ಮಾಡಬಹುದು?

ನಾವು ಮಾಡೋಣ



1. ಒಂದು ಜೋಡಕ್ಕೆ 8 ಕಾಲುಗಳಿವೆ.

   5 ಜೋಡಗಳಿಗೆ ..... ಕಾಲುಗಳಿರುತ್ತವೆ.


   10 ಜೋಡಗಳಿಗೆ ..... ಕಾಲುಗಳಿರುತ್ತವೆ.

   15 ಜೋಡಗಳಿಗೆ ..... ಕಾಲುಗಳಿರುತ್ತವೆ.

2. 23 ಜೋಡಗಳಿಗೆ ಎಷ್ಟು ಕಾಲುಗಳಿರುತ್ತವೆ?

3. ಒಂದು ಗುಂಪಿನಲ್ಲಿರುವ ಜೋಡಗಳಿಗೆ 32 ಕಾಲುಗಳಿವೆ. ಆ ಗುಂಪಿನಲ್ಲಿ ಎಷ್ಟು ಜೋಡಗಳಿವೆ?

4. ಇಲ್ಲಿ 3 ಚಕ್ರಗಳ ಆಟೋರಿಕ್ಷಾ ಇದೆ. ಮುಂದೆ ನೀಡಿರುವ ಆಟೋರಿಕ್ಷಾಗಳಲ್ಲಿ ಎಷ್ಟು ಚಕ್ರಗಳಿರುತ್ತವೆ?



   a. 18 ಆಟೋರಿಕ್ಷಾಗಳಲ್ಲಿ?

   b. 34 ಆಟೋರಿಕ್ಷಾಗಳಲ್ಲಿ?

5. ಗ್ಯಾರೇಜ್‌ನಲ್ಲಿರುವ ಆಟೋರಿಕ್ಷಾಗಳಲ್ಲಿ ಒಟ್ಟು 36 ಚಕ್ರಗಳಿವೆ. ಗ್ಯಾರೇಜ್‌ನಲ್ಲಿ ಎಷ್ಟು ಆಟೋರಿಕ್ಷಾಗಳಿವೆ?

6. 55 ಇರುವೆಗಳ ಸಾಲು ಇದೆ. (ಒಂದು ಇರುವೆಗೆ 6 ಕಾಲುಗಳಿವೆ) ಸಾಲಿನಲ್ಲಿರುವ ಇರುವೆಗಳ ಕಾಲುಗಳ ಒಟ್ಟು ಸಂಖ್ಯೆ ಎಷ್ಟು?

7. ಮಿಕ್ಕಿ ಎಂಬ ಇಲಿಯು ಕೊಟ್ಟಿಗೆಯಲ್ಲಿ ಹಸುಗಳ 48 ಕಾಲುಗಳನ್ನು ನೋಡಬಲ್ಲದು. ಕೊಟ್ಟಿಗೆಯಲ್ಲಿರುವ ಹಸುಗಳ ಸಂಖ್ಯೆ ಎಷ್ಟು?

8. ಕರಿ ಎಂಬ ಕಾಗೆ ಕೊಟ್ಟಿಗೆಯ ಹಸುಗಳಲ್ಲಿ 24 ಕೊಂಬುಗಳನ್ನು ನೋಡಬಲ್ಲದು. ಕೊಟ್ಟಿಗೆಯಲ್ಲಿರುವ ಒಟ್ಟು ಕಾಲುಗಳ ಸಂಖ್ಯೆ ಎಷ್ಟು?

ನಾವು ಯೋಚಿಸೋಣ

1. ಒಂದು ಕಪ್ಪೆ '0' ಯಲ್ಲಿದೆ. ಅದು ಕೇವಲ 7 ಜಿಗಿತಗಳನ್ನು ತೆಗೆದುಕೊಳ್ಳುತ್ತದೆ. 50 ನ್ನು ದಾಟುವ ಮೊದಲು ಕಪ್ಪೆಯು ತಲುಪಬಹುದಾದ ಅತೀ ದೊಡ್ಡ ಸಂಖ್ಯೆ ಯಾವುದು?



2. ಒಂದು ಕಪ್ಪೆಯು 50 ರಿಂದ ಹಿಂದಕ್ಕೆ ಜಿಗಿಯಲು ಬಯಸುತ್ತದೆ. ಅದು 7 ರ ಜಿಗಿತಗಳನ್ನು ಮುಂದುವರೆಸುತ್ತದೆ. ಯಾವ ಸಂಖ್ಯೆಯ ನಂತರ ಕಪ್ಪೆಗೆ 7 ರ ಜಿಗಿತವನ್ನು ಮಾಡಲು ಸಾಧ್ಯವಾಗುವುದಿಲ್ಲ?



3. ಕಪ್ಪೆ 0 ಯನ್ನು ತಲುಪಲು ಪ್ರತಿಸಾರಿ 7 ರ ಜಿಗಿತಗಳಂತೆ ಯಾವ ಸಂಖ್ಯೆಗಳಿಂದ ಪ್ರಾರಂಭಿಸಬೇಕು? ನೀವು ಏನನ್ನು ಗಮನಿಸುವಿರಿ?



ಪುರಿ ಬೀಚ್


1. ಒಂದು ಗೋಡೆ ಹ್ಯಾಂಗಿಂಗ್ ಬೆಲೆ ₹ 42. ಎರಡು ಹ್ಯಾಂಗಿಂಗ್‌ಗಳ ಬೆಲೆ ಎಷ್ಟಾಗುತ್ತದೆ?



ಎರಡು ಗೋಡೆ ಹ್ಯಾಂಗಿಂಗ್‌ಗಳ ಬೆಲೆ ₹ 42 + ₹ 42 = 2 x ₹ 42

ಎರಡು ಗೋಡೆ ಹ್ಯಾಂಗಿಂಗ್‌ಗಳ ಬೆಲೆ: _____

2. ಒಂದು ಕಪ್ ರಬ್ಡಿ ಬೆಲೆ ₹ 75. ಪ್ರೀತಿ 5 ರಬ್ಡಿ ಕಪ್‌ಗಳನ್ನು ಕೊಳ್ಳುತ್ತಾಳೆ. ಅವಳಲ್ಲಿ ತನ್ನ ತಾಯಿಯ ಪರ್ಸ್ ಇದೆ. ಅದರಲ್ಲಿ ಕೇವಲ ₹ 100 ರ ನೋಟ್‌ಗಳಿವೆ.



ಅವಳು ₹ 100 ರ ಎಷ್ಟು ನೋಟ್‌ಗಳನ್ನು ಅಂಗಡಿಯವನಿಗೆ ಕೊಡಬೇಕಿದೆ? ಅಂಗಡಿಯವನು ಪ್ರೀತಿಗೆ ಎಷ್ಟು ಹಣವನ್ನು ಹಿಂದಿರುಗಿಸಬೇಕಿದೆ?

5 ರಬ್ಡಿ ಕಪ್‌ಗಳ ಒಟ್ಟು ಮೊತ್ತ ಎಷ್ಟು?

ಕಪ್ಪೆ ಚಿಪ್ಪುಗಳು

ಧ್ರುವ ಸಮುದ್ರದ ಬಳಿ ವಾಸಿಸುತ್ತಾನೆ. ಅವನು ತನ್ನ ಮೂವರು ಸ್ನೇಹಿತರಿಗೂ ಹಾರ ಮಾಡಲು ಯೋಚಿಸುತ್ತಾನೆ. ಅವನು ಇಡೀ ದಿನ ಕಪ್ಪೆ ಚಿಪ್ಪುಗಳನ್ನು ಹುಡುಕುತ್ತಿದ್ದನು. ಸಂಜೆಯ ಹೊತ್ತಿಗೆ 112 ಕಪ್ಪೆ ಚಿಪ್ಪುಗಳನ್ನು ಸಂಗ್ರಹಿಸಿದನು. ಈಗ ವಿವಿಧ ಬಣ್ಣಗಳ ಮತ್ತು ಹೊಳೆಯುವ ಚಿಪ್ಪುಗಳು ಅವನಲ್ಲಿವೆ.



ನಾನು 28 ಚಿಪ್ಪುಗಳಿಂದ ಹಾರ ಮಾಡುತ್ತೇನೆ. ನನ್ನ ಮೂವರು ಸ್ನೇಹಿತರಿಗೂ ಹಾರಗಳನ್ನು ಮಾಡಲು ಈ ಚಿಪ್ಪುಗಳು ಸಾಕಾಗುತ್ತವೆಯೇ?

ಅವನು ಒಂದು ಹಾರಕ್ಕೆ 28 ಚಿಪ್ಪುಗಳನ್ನು ತೆಗೆದುಕೊಂಡನು.

$112 - 28 = 84$

ಈಗ ಅವನ ಬಳಿ 84 ಚಿಪ್ಪುಗಳು ಉಳಿದಿವೆ. ಎರಡನೇ ಹಾರಕ್ಕೆ ಪುನಃ ಅವನು ಇನ್ನೂ 23 ಚಿಪ್ಪುಗಳನ್ನು ತೆಗೆದುಕೊಂಡನು.

- ಈಗ ಎಷ್ಟು ಚಿಪ್ಪುಗಳು ಉಳಿದಿವೆ?
- ನಂತರ ಅವನು ಮೂರನೇ ಹಾರಕ್ಕಾಗಿ ಚಿಪ್ಪುಗಳನ್ನು ತೆಗೆದುಕೊಂಡನು.
- ಆದ್ದರಿಂದ, ಅವನಲ್ಲಿ ..... ಚಿಪ್ಪುಗಳು ಉಳಿದಿವೆ.
- ಅವನ ಎಲ್ಲಾ ಸ್ನೇಹಿತರಿಗೆ ಹಾರ ಮಾಡಲು ಚಿಪ್ಪುಗಳು ಸಾಕಾಗುತ್ತವೆಯೇ? .....
- ಧ್ರುವ 112 ಚಿಪ್ಪುಗಳಿಂದ ಎಷ್ಟು ಹಾರಗಳನ್ನು ಮಾಡಬಹುದು? .....



ಇವುಗಳನ್ನು ಪ್ರಯತ್ನಿಸಿ

1. ಕಣ್ಣು 12 ಕಪ್ಪೆ ಚಿಪ್ಪುಗಳಿಂದ ಒಂದು ಹಾರವನ್ನು ಮಾಡುತ್ತಾನೆ. 100 ಕಪ್ಪೆ ಚಿಪ್ಪುಗಳಿಂದ ಅಂತಹ ಎಷ್ಟು ಹಾರಗಳನ್ನು ಮಾಡಬಹುದು?

2. ಧ್ರುವ ಕಪ್ಪೆ ಚಿಪ್ಪುಗಳನ್ನು ಹುಡುಕುವಾಗ, ಅವನಿಗೆ 127 ಹೊಳೆಯುವ ಕಲ್ಲುಗಳು ಸಿಗುತ್ತವೆ. ಅವುಗಳನ್ನು ತನ್ನ ಮೂವರು ಸ್ನೇಹಿತರಿಗೂ ಸಮವಾಗಿ ಹಂಚುತ್ತಾನೆ. ಪ್ರತಿಯೊಬ್ಬರಿಗೂ ಎಷ್ಟು ಸಿಗುತ್ತದೆ?

3. ಪ್ರೀತಿಯ ಬಳಿ ₹ 500 ನೋಟು ಇದೆ. ಅದನ್ನು ಕಡಿಮೆ ಮುಖಬೆಲೆಯ ನೋಟುಗಳಿಗೆ ಬದಲಾಯಿಸಲು ಬಯಸುತ್ತಾಳೆ. ಅವಳು

   (i) ಎಲ್ಲಾ 50 ರೂಪಾಯಿ ನೋಟುಗಳು

   (ii) ಎಲ್ಲಾ 20 ರೂಪಾಯಿ ನೋಟುಗಳು

   (iii) ಎಲ್ಲಾ 10 ರೂಪಾಯಿ ನೋಟುಗಳನ್ನು ಬಯಸಿದರೆ, ಎಷ್ಟು ನೋಟುಗಳು ಅವಳಿಗೆ ಸಿಗುತ್ತವೆ?





ಶಿಕ್ಷಕರಿಗೆ ಟಿಪ್ಪಣಿ: ದೊಡ್ಡ ಸಂಖ್ಯೆಗಳ ಭಾಗಾಕಾರದ ಮೇಲಿನ ಸಮಸ್ಯೆಗಳನ್ನು ಪರಿಹರಿಸಲು, ಗುಣಾಕಾರದ ಮಗ್ಗಿ ತಿಳಿಯದಿದ್ದರೂ, ಪುನರಾವರ್ತಿತ ವ್ಯವಕಲನವನ್ನು ಉಪಯೋಗಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ನೈಜ ಜೀವನದ ಸನ್ನಿವೇಶಗಳನ್ನು ಆಧರಿಸಿದ ಹೆಚ್ಚಿನ ಸಮಸ್ಯೆಗಳನ್ನು ನೀಡಬಹುದು.



ನಾವು ಅನ್ವೇಷಿಸೋಣ

1 ರಿಂದ 10 ರವರೆಗಿನ 10 ಸಂಖ್ಯಾ ಕಾರ್ಡ್‌ಗಳಿವೆ. ಮೊಹರು ಮಾಡಿದ 5 ಲಕೋಟೆಗಳಿವೆ. ಪ್ರತಿಯೊಂದರಲ್ಲೂ ಎರಡು ಕಾರ್ಡ್‌ಗಳಿವೆ. ಪ್ರತಿ ಲಕೋಟೆಯ ಮೇಲ್ಭಾಗದಲ್ಲಿ ಅದರೊಳಗೆ ಇರುವ ಸಂಖ್ಯೆಗಳ ಗುಣಲಬ್ಧವನ್ನು ಬರೆಯಲಾಗಿದೆ. 5ನೇ ಲಕೋಟೆಯಲ್ಲಿ 5 ಮತ್ತು 9 ರ ಕಾರ್ಡ್‌ಗಳಿವೆ. ಸಂಖ್ಯೆ 5 x 9 = 45 ನ್ನು ಲಕೋಟೆಯ ಮೇಲೆ ಬರೆಯಲಾಗಿದೆ.





ಪ್ರತಿ ಲಕೋಟೆಯ ಒಳಗಿರುವ ಸಂಖ್ಯಾ ಕಾರ್ಡ್‌ಗಳನ್ನು ಗುರುತಿಸಿ.


ಸಂಖ್ಯಾ ಕಾರ್ಡ್‌ಗಳು


1	2	3	4
5	6	7	8
9	10	11	12
13	14	15	16
17	18	19	20
30	40	50	60
70	80	90	100
200	300	400	500
600	700	800	900

ಸಂಖ್ಯಾ ಕಾರ್ಡ್‌ಗಳು


ನಾಲ್ಕು	ಮೂರು	ಎರಡು	ಒಂದು
ಎಂಟು	ಏಳು	ಆರು	ಐದು
ಹನ್ನೆರಡು	ಹನ್ನೊಂದು	ಹತ್ತು	ಒಂಬತ್ತು
ಹದಿನಾರು	ಹದಿನೈದು	ಹದಿನಾಲ್ಕು	ಹದಿಮೂರು
ಇಪ್ಪತ್ತು	ಹತ್ತೊಂಬತ್ತು	ಹದಿನೆಂಟು	ಹದಿನೇಳು
ಅರವತ್ತು	ಐವತ್ತು	ನಲವತ್ತು	ಮೂವತ್ತು
ನೂರು	ತೊಂಬತ್ತು	ಎಂಬತ್ತು	ಎಪ್ಪತ್ತು
ಐನೂರು	ನಾನೂರು	ಮುನ್ನೂರು	ಇನ್ನೂರು
ಒಂಬೈನೂರು	ಎಂಟುನೂರು	ಏಳುನೂರು	ಆರುನೂರು

ಭಿನ್ನರಾಶಿಗಳ ಕಾರ್ಡ್‌ಗಳು







ಟ್ಯಾನ್‌ಗ್ರಾಮ್




ವರ್ಗಗಳು




ಭಿನ್ನರಾಶಿಗಳ ಕಾರ್ಡ್‌ಗಳು





ಟ್ಯಾನ್‌ಗ್ರಾಮ್



ವರ್ಗಗಳು

